
RNI.KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 87 ಪುಟ: 06 ಶುಕ್ರವಾರ 28-02-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)    Executive Editor: L P Babu    Honourary Editor: Venkatesh



ಐಕಾನಿಕ್ ಜೀನತ್ ಅಮಾನ್ ಭೇಟಿ ಮಾಡಿದ ಸಾನ್ಯಾ

ಯಾಕೆ ಸಣ್ಣ ಆಗಿದ್ಯಾ... ದಪ್ಪನೇ ಇರು

ವಿಚ್ಛೇದನ ಘೋಷಿಸಿದ ಸಂಯುಕ್ತ ಪುಟ 6

## ಪೋಕ್ಸೋ ಪ್ರಕರಣ: ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪಗೆ ಮತ್ತೆ ಸಂಕಷ್ಟ


# ಬಿಎಸ್‌ವೈಗೆ ಸಮನ್ಸ್

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಬೆಂಗಳೂರಿನ 1ನೇ ತ್ವರಿತಗತಿ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಯಡಿಯೂರಪ್ಪ ಅವರ ಜೊತೆ ಸಹ-ಆರೋಪಿಗಳಾದ ಮರುಳಸಿದ್ಧಯ್ಯ ಜಿ. ಮರಿಸ್ವಾಮಿ, ವೈ.ಎಂ. ಅರುಣಾ, ಮತ್ತು ರುದ್ರೇಶ ಅವರಿಗೂ ಸಹ ಸಮನ್ಸ್ ಜಾರಿಯಾಗಿದೆ.

ಯಡಿಯೂರಪ್ಪ ಮತ್ತ ಸಹ ಆರೋಪಿಗಳು ನ್ಯಾಯಾಲಯದ ಸೂಚನೆ ಪ್ರಕಾರ ಮಾರ್ಚ್ 15ರಂದು ವಿಚಾರಣೆಗೆ ಹಾಜರಾಗಬೇಕಾಗಿದೆ. ನ್ಯಾಯಾಲಯ ದಿನಾಂಕ ನಿಗದಿ ಪಡಿಸಿ ಖುದ್ದು ಹಾಜರಾಗುವಂತೆ ಸೂಚಿಸಿದೆ.

ಪೋಕ್ಸೋ ಪ್ರಕರಣದಲ್ಲಿ ಇತ್ತೀಚೆಗೆ ಮಾಜಿ ಸಿಎಂ ಯಡಿಯೂರಪ್ಪ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿತ್ತು. ಬಿ.ಎಸ್. ಯಡಿಯೂರಪ್ಪ ಅವರಿಗೆ ದೊಡ್ಡ ರಿಲೀಫ್ ನೀಡಿದ ಹೈಕೋರ್ಟ್, ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸೂಚಿಸಿತ್ತು. ವಿಚಾರಣೆಗೆ ಮೊದಲು ಹಾಜರಾತಿಯಿಂದ ವಿನಾಯಿತಿ ಕೂಡ ನೀಡಲಾಗಿತ್ತು. ಆದರೆ ಇಂದು ವಿಚಾರಣೆ ನಡೆಸಿದ ಒಂದನೇ ತ್ವರಿತಗತಿ ನ್ಯಾಯಾಲಯ ಖುದ್ದು ಹಾಜರಾತಿಗೆ ಸಮನ್ಸ್ ಜಾರಿ ಮಾಡಿದೆ.



ಪ್ರಕರಣ ರದ್ದತಿ ಕೋರಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಧಾರವಾಡ ಪೀಠ, ನಿರೀಕ್ಷಣಾ ಜಾಮೀನು ನೀಡಿತ್ತು. ಆದರೆ, ಪ್ರಕರಣ ರದ್ದು ಮಾಡಲು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ ನಿರಾಕರಿಸಿತ್ತು. ಆ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿದ ನ್ಯಾಯಾಲಯ ಈ ಆದೇಶ ಹೊರಡಿಸಿದೆ. ಹೀಗಾಗಿ ಯಡಿಯೂರಪ್ಪ ಬಂಧನದಿಂದ ಪಾರಾದರೂ ಕೂಡ ವಿಚಾರಣೆ ಎದುರಿಸಲೇಬೇಕಾಗಿದೆ.

ಬಿ ಎಸ್ ಯಡಿಯೂರಪ್ಪ ಅವರ ಬಳಿ ಸಹಾಯ ಕೋರಿ 2024ನೇ ಸಾಲಿನ ಫೆಬ್ರವರಿ2ರಂದು ತೆರಳಿದ್ದ ತಾಯಿ ಮತ್ತು ಅವರ ಅಪ್ರಾಪ್ತ ವಯಸ್ಸಿನ ಮಗಳು ಯಡಿಯೂರಪ್ಪ ಅವರು ನಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದರು.

ಯಡಿಯೂರಪ್ಪ ಅವರ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಅವರ ನಿವಾಸಕ್ಕೆ ಬಂದಿದ್ದ ಬಾಲಕಿಯನ್ನು ಕೋಣೆಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿದ್ದರು ಎಂದು ಆರೋಪಿಸಿ ಮಾರ್ಚ್14ರಂದು ಸದಾಶಿವನಗರ ಠಾಣೆಯಲ್ಲಿ ದೂರು ನೀಡಿ ಪ್ರಕರಣ ದಾಖಲಿಸಿದ್ದರು.


ಆ ವೇಳೆ ಯಡಿಯೂರಪ್ಪ ಅವರ ವಿರುದ್ಧ ಫೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ್ದ ವೇಳೆ ಪುಟ 2



ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಅವರ ನೇತೃತ್ವದ ರಾಜ್ಯ ಬಿಜೆಪಿ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಭಿವೃದ್ಧಿಗೆ ಅನುದಾನವೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಮನವಿ ಮಾಡಿತು.ಈ ಸಂದರ್ಭದಲ್ಲಿ ಬಿ.ವೈ. ವಿಜಯೇಂದ್ರ ಅವರ ಜೊತೆ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್, ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್, ಬೆಂಗಳೂರು ದಕ್ಷಿಣ ಸಂಸದ ಹಾಗೂ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ , ಬೆಂಗಳೂರಿನ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು, ರಾಜ್ಯಸಭಾ ಸದಸ್ಯರು, 3 ಜಿಲ್ಲೆಗಳ ಅಧ್ಯಕ್ಷರು, ಮತ್ತು ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಅವರು ಈ ನಿಯೋಗದಲ್ಲಿ ಇದ್ದರು. ಕುಮಾರಕೃಪಾ ಅತಿಥಿಗೃಹದಲ್ಲಿ ಸಭೆ ಸೇರಿ, ನಂತರ ಮುಖ್ಯಮಂತ್ರಿಗಳ ಕಾವೇರಿ ನಿವಾಸಕ್ಕೆ ಭೇಟಿ ನೀಡಿದ್ದರು.

## ಶಾ ಅವರ ಹೇಳಿಕೆ ತಿರುಚಿ ಜನರ ದಿಕ್ಕು ತಪ್ಪಿಸಬೇಡಿ

**ಬೆಂಗಳೂರು:** ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ತಿರುಚಿ ತೋಳ ಬಂತು ತೋಳ ಎಂದು ಜನರಿಗೆ ಭಯಹುಟ್ಟಿಸಲು ಹೊರಟಿರುವ ಸಿದ್ದರಾಮಯ್ಯನವರೇ, ಅಮಿತ್ ಶಾ ಹೇಳಿರುವುದು ಹಾಲಿ ಲೋಕಸಭಾ ಸಂಖ್ಯೆಗೆ ಆಧಾರಿತವಾಗಿ ಶೇಕಡಾವಾರು ಲೋಕಸಭಾ ಕ್ಷೇತ್ರಗಳು ಹೆಚ್ಚಾಗುತ್ತವೆ. ಆ ಸಂಖ್ಯೆ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಎಲ್ಲಾ ರಾಜ್ಯಗಳ ಲೋಕಸಭಾ/ವಿಧಾನಸಭಾ ಕ್ಷೇತ್ರಗಳು ಈಗಿರುವುದಕ್ಕಿಂತ ಹೆಚ್ಚಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ ಷ್ಪಷ್ಟಪಡಿಸಿದ್ದಾರೆ.



ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಉತ್ತರ ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಹೆಚ್ಚಾಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಕರ್ನಾಟಕದಲ್ಲಿಯೂ ಹೆಚ್ಚಾಗುತ್ತದೆ. ಹಾಲಿ ಕ್ಷೇತ್ರಗಳ ಸಂಖ್ಯೆಯನ್ನು ಶೇಕಡವಾರು ಪ್ರಮಾಣವಾಗಿ ಪರಿಗಣಿಸಲಾಗುತ್ತದೆಯೇ ಹೊರತು ಜನಸಂಖ್ಯೆಯನ್ನಲ್ಲ ಎಂಬುದನ್ನು ಮುಖ್ಯಮಂತ್ರಿಗಳಾಗಿ ಮೊದಲು ಅರ್ಥಮಾಡಿಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.

ನಾಡು-ನುಡಿ, ಜನರ ಹಿತರಕ್ಷಣೆಯ ವಿಷಯದಲ್ಲಿ ಬಿಜೆಪಿ ಎಂದಿಗೂ ರಾಜಿಯಾಗುವ ಪ್ರಶ್ನೆಯೇ ಇಲ್ಲ, ನಾಡ ಬಗೆಗಿನ ಕಾಳಜಿಯಲ್ಲಿ ಬಿಜೆಪಿ ಎಂದಿಗೂ ಎರಡನೆಯ ಸ್ಥಾನದಲ್ಲಿ ಇರುವುದಿಲ್ಲ ಎನ್ನುವುದನ್ನು ಮುಖ್ಯಮಂತ್ರಿಗಳಿಗೆ ಮನನ ಮಾಡಿಸಲು ಬಯಸುತ್ತೇನೆ ಎಂದು ಹೇಳಿದ್ದಾರೆ.

ರಾಜ್ಯದ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಜನರ ದಿಕ್ಕು ತಪ್ಪಿಸಲು ಹೊರಟಿರುವ ಸಿದ್ದರಾಮಯ್ಯನವರ ಹೇಳಿಕೆಯಲ್ಲಿ ಯಾವ ಸತ್ಯಾಂಶವೂ ಇಲ್ಲ. ಹುರುಳೂ ಇಲ್ಲ.ಈ ಮೊದಲಿನಿಂದಲೂ ಪ್ರಾಂತೀಯತೆಯ ಹೆಸರಿನಲ್ಲಿ ಇಲ್ಲಸಲ್ಲದ ಅಪ ಪ್ರಚಾರ ನಡೆಸುತ್ತಿರುವ ಪುಟ 2

## ಕೆರೆಯಲ್ಲಿ ಟೆಕ್ಕಿ ಮೃತದೇಹ ಪತ್ತೆ, ಆತ್ಮಹತ್ಯೆ ಶಂಕೆ

**ಕುಣಿಗಲ್** ಬಳಿಯ ದೊಡ್ಡಕೆರೆಯಲ್ಲಿ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯ ಟೆಕ್ಕಿ ಸುಮಾ ಅವರ ಮೃತದೇಹ ಪತ್ತೆಯಾಗಿದೆ. ಗುರುವಾರ ಸಂಜೆ ಕೆರೆ ಬಳಿ ಅವರ ವಸ್ತುಗಳು ಪತ್ತೆಯಾದ ನಂತರ ಶೋಧ ಕಾರ್ಯ ನಡೆಸಲಾಯಿತು. ಕೌಟುಂಬಿಕ ಕಲಹದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಪುಟ 2

## ಬರ್ಬರ ಕೊಲೆ

**ಚಿಕ್ಕಬಳ್ಳಾಪುರ:** ಬಾರ್ ಸಪ್ಲೆಯರ್‌ನನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಬಾಗೇಪಲ್ಲಿ ಪಟ್ಟಣದ ಬಳಿ ಶುಕ್ರವಾರ ನಡೆದಿದೆ. ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಚಿತ್ರಾವತಿ ಡ್ಯಾಂ ಬಳಿ ಘಟನೆ ನಡೆದಿದ್ದು, ಕೊಲೆಯಾದ ವ್ಯಕ್ತಿ ಬಾಗೇಪಲ್ಲಿ ಪಟ್ಟಣದ ಶ್ರೀನಿವಾಸ್ (48) ಎಂದು ತಿಳಿದು ಬಂದಿದೆ. ಕೊಲೆಯಾದ ದುರ್ದೈವಿ ಬಾಗೇಪಲ್ಲಿ ಪಟ್ಟಣದ ಪ್ರೀತಿ ಬಾರ್‌ನಲ್ಲಿ ಸಪ್ಲೆಯರ್ ಆಗಿ ಕೆಲಸ ಮಾಡುತ್ತಿದ್ದ. ಸ್ಥಳಕ್ಕೆ ಬಾಗೇಪಲ್ಲಿ ಠಾಣೆ ಪೊಲೀಸರು ಭೇಟಿ ನೀಡಿ ಪುಟ 2

## ಲಾರಿಗೆ ಕಾರು ಡಿಕ್ಕಿ: ಚಾಲಕ ಸ್ಥಳದಲ್ಲೇ ಸಾವು

**ಯಾದಗಿರಿ:** ಜಿಲ್ಲೆಯ ವಡಗೇರಾ ತಾಲ್ಲೂಕಿನ ತಡಿಬಿಡಿ ಗ್ರಾಮದಿಂದ ಅನತಿ ದೂರದಲ್ಲಿ ಲಾರಿ ಮತ್ತು ಕಾರಿನ ನಡುವೆ ಭೀಕರ ಅಪಘಾತವಾಗಿ ಕಾರು ಚಾಲಕ ಬಸಲಿಂಗಪ್ಪ (ಸೂರಿ) (27) ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಡೆದಿದೆ. ಶುಕ್ರವಾರ ಬೆಳಿಗ್ಗೆ ಸುಮಾರು 7 ಗಂಟೆಯ ಸಮಯದಲ್ಲಿ ಯಾದಗಿರಿ ಕಡೆಯಿಂದ ಸುರಪುರದ ಕಡೆಗೆ ಹೊರಟಿದ್ದ ಕಾರು ಪುಟ 2

## ರೈಲ್ವೆ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದ ಅಶ್ವಿನಿ ವೈಷ್ಣವ್

**ನವದೆಹಲಿ:** ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಮಹಾ ಕುಂಭಮೇಳಕ್ಕೆ ತೆರೆ ಬಿದ್ದಿದ್ದು, ಬರೋಬ್ಬರಿ 17000ಕ್ಕೂ ಹೆಚ್ಚು ರೈಲುಗಳು ಸಂಚಾರ ನಡೆಸಿವೆ. ಮಹಾಕುಂಭದ ಪ್ರಯಾಗ್ ರಾಜ್‌ನಲ್ಲಿ ರೈಲ್ ಕರ್ಮಯೋಗಿಯ ಅಸಾಧಾರಣ ಪ್ರಯತ್ನಗಳಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಅಶ್ವಿನಿ ವೈಷ್ಣವ್ ಅವರು 2025ರ ಮಹಾಕುಂಭಕ್ಕೆ ಭಾರತೀಯ ರೈಲ್ವೆಯ ವ್ಯಾಪಕ ಸಿದ್ಧತೆಗಳನ್ನು ವೈಯಕ್ತಿಕವಾಗಿ ಪರಿಶೀಲಿಸಲು ಪ್ರಯಾಗ್ ರಾಜ್‌ಗೆ ಭೇಟಿ ನೀಡಿದರು. ಈ ಭವ್ಯ ಧಾರ್ಮಿಕ ಸಭೆಯ ಪ್ರಮಾಣ ಮತ್ತು ಮಹತ್ವವನ್ನು ಗುರುತಿಸಿದ ಅವರು, ಉತ್ತರ ಮಧ್ಯ ರೈಲ್ವೆ, ಈಶಾನ್ಯ ರೈಲ್ವೆ ಮತ್ತು ಉತ್ತರ ರೈಲ್ವೆ ಅಡಿಯಲ್ಲಿನ ವಿವಿಧ ನಿಲ್ದಾಣಗಳಿಗೆ ಭೇಟಿ ನೀಡಿ, ನೆಲದ ಕಾರ್ಯಾಚರಣೆಗಳನ್ನು ನಿರ್ಣಯಿಸಿದರು. ತಮ್ಮ ಭೇಟಿಯ ಸಮಯದಲ್ಲಿ, ಅವರು ರೈಲ್ವೆ ಸಿಬ್ಬಂದಿಯೊಂದಿಗೆ ಸಂವಹನ ನಡೆಸಿದರು.

ಪ್ರಮುಖ ವ್ಯವಸ್ಥೆಗಳನ್ನು ಪರಿಶೀಲಿಸಿದರು ಮತ್ತು ಅಭೂತಪೂರ್ವ ಭಕ್ತರ ಒಳಹರಿವನ್ನು ಸರಿಹೊಂದಿಸಲು ಎಲ್ಲಾ ವ್ಯವಸ್ಥೆಗಳು ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಖಚಿತಪಡಿಸಿಕೊಂಡರು.

ವಿವಿಧ ಇಲಾಖೆಗಳ ನಡುವಿನ ತಡೆರಹಿತ ಸಮನ್ವಯವನ್ನು



ವೈಷ್ಣವ್ ಶ್ಲಾಘಿಸಿದರು ಮತ್ತು ಎಲ್ಲಾ ಯಾತ್ರಿಕರಿಗೆ ಸುರಕ್ಷಿತ, ಪರಿಣಾಮಕಾರಿ ಮತ್ತು ಆರಾಮದಾಯಕ ಪ್ರಯಾಣವನ್ನು ಸುಗಮಗೊಳಿಸುವ ಭಾರತೀಯ ರೈಲ್ವೆಯ ಬದ್ಧತೆಯನ್ನು ಪುನರುಚ್ಚರಿಸಿದರು.

ರೈಲ್ವೆ ಸಚಿವರು ಪ್ರಧಾನಿಯವರ ನಿರಂತರ ಮಾರ್ಗದರ್ಶನಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು. ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಮತ್ತು ನೆರೆಯ ರಾಜ್ಯಗಳ ಸರ್ಕಾರಗಳು ಯಾತ್ರಿಕರ ಬೃಹತ್ ಒಳಹರಿವನ್ನು ನಿರ್ವಹಿಸುವಲ್ಲಿ ಅವರ ಅಚಲ ಸಹಕಾರಕ್ಕಾಗಿ ಧನ್ಯವಾದ ಅರ್ಪಿಸಿದರು.

ಭಾರತೀಯ ರೈಲ್ವೆ 2025ರ ಮಹಾಕುಂಭಕ್ಕಾಗಿ ತನ್ನ ಆರಂಭಿಕ ಕಾರ್ಯಾಚರಣೆಯ ಯೋಜನೆಯನ್ನು ಗಮನಾರ್ಹವಾಗಿ ಮೀರಿದೆ. ಒಟ್ಟು 17,152 ರೈಲುಗಳನ್ನು ಓಡಿಸಲಾಗಿದ್ದು, ಇದು ಮೂಲತಃ ಯೋಜಿಸಲಾದ 13,000 ರೈಲುಗಳನ್ನು ಮೀರಿದೆ. ಇದು ಕಳೆದ ಕುಂಭಕ್ಕೆ ಹೋಲಿಸಿದರೆ ನಾಲ್ಕುಪಟ್ಟು ಹೆಚ್ಚಾಗಿದೆ. ಇದರಲ್ಲಿ 7667 ವಿಶೇಷ ರೈಲುಗಳು ಮತ್ತು 9485 ನಿಯಮಿತ ರೈಲುಗಳು ಸೇರಿವೆ. ಇದರಿಂದಾಗಿ ಯಾತ್ರಿಕರು ತಮ್ಮ ಸ್ಥಳಗಳನ್ನು ಸರಾಗವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪುತ್ತಾರೆ ಎಂದು ಖಚಿತಪಡಿಸಲಾಗಿದೆ.

ಮಹಾಕುಂಭಕ್ಕೆ ಹಾಜರಾಗುವ ಒಟ್ಟು ಯಾತ್ರಿಕರ ಸಂಖ್ಯೆ 66 ಕೋಟಿಯಾಗಿದ್ದು, ಪ್ರಯಾಗ್‌ರಾಜ್‌ನ ಒಂಬತ್ತು ಪ್ರಮುಖ ರೈಲು ನಿಲ್ದಾಣಗಳಿಂದ 4.24 ಕೋಟಿ ಪ್ರಯಾಣಿಕರನ್ನು ನಿರ್ವಹಿಸಲಾಗಿದೆ. ಪ್ರಯಾಣಿಕರ ಸುರಕ್ಷತೆ ಮತ್ತು ಅನುಕೂಲತೆ ಖಚಿತಪಡಿಸಿಕೊಳ್ಳಲು ಭಾರತೀಯ ರೈಲ್ವೆ ಬಲವಾದ ವೈದ್ಯಕೀಯ ಮತ್ತು ತುರ್ತು ಬೆಂಬಲ ವ್ಯವಸ್ಥೆಯನ್ನು ಜಾರಿಗೆ ತಂದಿತು

## ದರ್ಶನ್ ಜಾಮೀನು ಷರತ್ತು ಸಡಿಲಿಸಿದ ಹೈಕೋರ್ಟ್


**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಷರತ್ತುಬದ್ಧ ಜಾಮೀನು ಪಡೆದು ಈಗಾಗಲೇ ಜೈಲಿನಿಂದ ಹೊರ ಬಂದಿರುವ ನಟ ದರ್ಶನ್ ಗೆ ಮತ್ತೊಮ್ಮೆ ರಿಲೀಫ್ ಸಿಕ್ಕಿದೆ.



ನಟ ದರ್ಶನ್ ಜಾಮೀನು ಷರತ್ತು ನಿಯಮವನ್ನ ಹೈಕೋರ್ಟ್ ಸಡಿಲಿಸಿದೆ. ಕೋರ್ಟ್ ಅನುಮತಿಯಿಲ್ಲದೇ ದೇಶ ಬಿಟ್ಟು ತೆರಳುವಂತಿಲ್ಲ ಎಂಧು ಸೂಚಿಸಿ ಹೈಕೋರ್ಟ್ ನಿಯಮಗಳನ್ನ ಸಡಿಲಿಸಿದೆ. ಈ ಮೊದಲು ಸೆಷನ್ಸ್ ಕೋರ್ಟ್ ವ್ಯಾಪ್ತಿ ಬಿಟ್ಟು ತೆರಳುವಂತಿರಲಿಲ್ಲ ಎಂಬ ಷರತ್ತನ್ನು ಕೋರ್ಟ್ ಹಾಕಿತ್ತು. ಇದರಿಂದ ದರ್ಶನ್ ಅವರು ಎಲ್ಲೇ ತೆರಳಬೇಕಾದರೂ ಕೋರ್ಟ್‌ನ ಅನುಮತಿ ಪಡೆದೇ ಹೋಗಬೇಕಿತ್ತು.

ಹೀಗಾಗಿ, ಷರತ್ತು ಸಡಿಲಿಕೆ ಕೋರಿ ಹೈಕೋರ್ಟ್‌ಗೆ ನಟ ದರ್ಶನ್ ಅರ್ಜಿ ಸಲ್ಲಿಕೆ ಮಾಡಿದ್ದರು. ಅರ್ಜಿಗೆ ಎಸ್ ಪಿಪಿ ಪ್ರಸನ್ನಕುಮಾರ್ ಆಕ್ಷೇಪಿಸಿದ್ದರು. ಪುಟ 2

## ನಾಳೆಯಿಂದ ದ್ವಿತೀಯ ಪಿಯು ಪರೀಕ್ಷೆ ಆರಂಭ



**ಬೆಂಗಳೂರು:** ರಾಜ್ಯದಲ್ಲಿ ನಾಳೆಯಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದ್ದು ಈಗಾಗಲೇ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮಾರ್ಚ್ 1 ರಿಂದ 20 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿವೆ. ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ಕೆಲವು ಮುಖ್ಯ ಸೂಚನೆಗಳನ್ನು ಅನುಸರಿಸಬೇಕು. ಎಲ್ಲಾ ಪರೀಕ್ಷಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್, ಸ್ಮಾರ್ಟ್ ವಾಚ್ ಬಳಕೆ ನಿಷೇಧಿಸಲಾಗಿದೆ. ಯಾವುದೇ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರುವುದು ಮತ್ತು ಪುಟ 2

## ಜನಸಂಖ್ಯೆ ಆಧಾರದ ಮೇಲೆ ಸಂಸದೀಯ ಕ್ಷೇತ್ರಗಳ ವಿಂಗಡಣೆ ಬೇಡ

**ಚೆನ್ನೈ:** ಜನಸಂಖ್ಯೆಯ ಆಧಾರದ ಮೇಲೆ ಸಂಸದೀಯ ಕ್ಷೇತ್ರಗಳನ್ನು ವಿಭಜಿಸುವ ಮೂಲಕ ದಕ್ಷಿಣದ ರಾಜ್ಯಗಳಿಗೆ ದಂಡ ವಿಧಿಸಬೇಡಿ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

ಸಂಸದೀಯ ಕ್ಷೇತ್ರ ಪುನರ್ ವಿಂಗಡಣೆ ಮೂಲಕ ರಾಜ್ಯಕ್ಕೆ ಅನ್ಯಾಯವಾದರೆ ಅದನ್ನು ನಾವು ಎಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದಾರೆ. ನಮ್ಮ ಬೇಡಿಕೆ ಸ್ಪಷ್ಟವಾಗಿದೆ  ಕೇವಲ ಜನಸಂಖ್ಯೆಯ ಆಧಾರದ ಮೇಲೆ ಸಂಸದೀಯ ಕ್ಷೇತ್ರಗಳನ್ನು ನಿರ್ಧರಿಸಬೇಡಿ.

ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಜವಾಬ್ದಾರಿಯುತ ಕ್ರಮಗಳನ್ನು ತೆಗೆದುಕೊಂಡು ದಕ್ಷಿಣದ ರಾಜ್ಯಗಳಿಗೆ ದಂಡ ವಿಧಿಸಬೇಡಿ ಎಂದು ಡಿಎಂಕೆ ಅಧ್ಯಕ್ಷ ಸ್ಟಾಲಿನ್ ವೀಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ಅಂತಹ ಅನ್ಯಾಯವನ್ನು ಜಾರಿಗೊಳಿಸಿದರೆ,



ತಮಿಳುನಾಡು ಮತ್ತು ಡಿಎಂಕೆ ಅದನ್ನು ಎಂದಿಗೂ ಸ್ವೀಕರಿಸುವುದಿಲ್ಲ ಎಂದು ಅವರು ತಮ್ಮ ಸಂದೇಶದಲ್ಲಿ ಒತ್ತಿ ಹೇಳಿದರು.

ತಮಿಳುನಾಡಿನ ಕಲ್ಯಾಣ ಮತ್ತು ಭವಿಷ್ಯದ ಬಗ್ಗೆ ನಾವು ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ನಾವು ಪ್ರತಿಜ್ಞೆ ಮಾಡಬೇಕು. ನಾವು ಒಟ್ಟಾಗಿ ನಿಂತು ನಮ್ಮ ರಾಜ್ಯದ ಹಕ್ಕುಗಳಿಗಾಗಿ ಹೋರಾಡಬೇಕು. ತಮಿಳುನಾಡು ಪ್ರತಿರೋಧಿಸುತ್ತದೆ ಮತ್ತು ಗೆಲ್ಲುತ್ತದೆ ಎಂದು ಅವರು ಹೇಳಿದರು.

## ಸೆಬಿಗೆ ತುಹಿನ್ ಕಾಂತ ಪಾಂಡೆ ನೂತನ ಚೇರ್ಮನ್

**ನವದೆಹಲಿ:** ಷೇರುಪೇಟೆ ನಿಯಂತ್ರಣ ಪ್ರಾಧಿಕಾರ ಸಂಸ್ಥೆಯಾದ ಸೆಬಿಗೆ ಹಿರಿಯ ಸರ್ಕಾರಿ ಅಧಿಕಾರಿ ತುಹಿನ್ ಕಾಂತ ಪಾಂಡೆ ಅವರನ್ನು ಸೆಬಿ ಛೇರ್ಮನ್ ಆಗಿ ನೇಮಕವಾಗಿದ್ದಾರೆ. ಪ್ರಸಕ್ತ ಛೇರ್ಮನ್ ಆಗಿರುವ ಮಾಧಬಿ ಪುರಿ ಬುಚ್ ಅವರ ಅವಧಿ ಶೀಘ್ರದಲ್ಲೇ ಮುಗಿಯಲಿದ್ದು, ಅವರ ಸ್ಥಾನವನ್ನು ಪಾಂಡೆ ತುಂಬಲಿದ್ದಾರೆ. ಒಡಿಶಾ ಕೇಡರ್‌ನ 1987ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾದ ತುಹಿನ್ ಕಾಂತ ಪಾಂಡೆ ಅವರು ಪಂಜಾಬ್ ಯೂನಿವರ್ಸಿಟಿಯಲ್ಲಿ ಅರ್ಥಶಾಸ್ತ್ರದಲ್ಲಿ ಎಂಎ ಮಾಡಿ, ಬ್ರಿಟನ್‌ನ ಬರ್ಮಿಂಗ್‌ಹ್ಯಾಂ ಯೂನಿವರ್ಸಿಟಿಯಲ್ಲಿ ಎಂಬಿಎ ಮಾಡಿದ್ದಾರೆ. ಐಎಎಸ್ ಆದ ಬಳಿಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿ ಅಪಾರ ಅನುಭವ ಗಳಿಸಿದವರಾಗಿದ್ದಾರೆ. ಒಡಿಶಾ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಎರಡರ ಅಡಿಯಲ್ಲೂ ಅವರು ಕೆಲಸ ಮಾಡಿದ್ದಾರೆ. ಹಣಕಾಸು, ತೆರಿಗೆ, ಆಡಳಿತ ಇತ್ಯಾದಿ ವಿಭಾಗಗಳಲ್ಲಿ ಅನುಭವ ಹೊಂದಿದ್ದಾರೆ. ಎಲ್‌ಐಸಿ ಐಪಿಒ, ಏರ್ ಇಂಡಿಯಾ ಮಾರಾಟ ಪ್ರಕ್ರಿಯೆಗಳು ಪಾಂಡೆ ಸುಪರ್ದಿಯಲ್ಲಿ ನಡೆದಿವೆ. ವಿಶ್ವಸಂಸ್ಥೆ ಕೈಗಾರಿಕೆ ಅಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ಕಚೇರಿಯಲ್ಲಿ ಕೆಲಸ ಮಾಡಿದ್ದಾರೆ. ಒಡಿಶಾ ಸಣ್ಣ ಕೈಗಾರಿಕೆಗಳ ನಿಗಮ ಮತ್ತು ಒಡಿಶಾ ರಾಜ್ಯ ಹಣಕಾಸು ನಿಗಮಗಳಲ್ಲೂ ಕೆಲಸ ಪುಟ 2





ಖ್ಯಾತ ಚಿತ್ರನಟ ದೇವರಾಜ್ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಶುಕ್ರವಾರ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು.

ಬೆಂಗಳೂರಿನ ನೆಹರೂ ತಾರಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಪ್ರೊ. ಯು ಆರ್ ರಾವ್ ಭವನದ ಉದ್ಘಾಟನೆ ಸಮಾರಂಭದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಮಾತನಾಡಿದರು. ವಿಧಾನಸಭಾಧ್ಯಕ್ಷ ಯು ಟಿ ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಬೋಸರಾಜ್, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಡಾ. ಎಂ ಸಿ ಸುಧಾಕರ್, ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ಶಾಸಕರಾದ ರಿಜ್ವಾನ್ ಅರ್ಶದ್, ಸಲೀಂ ಅಹ್ಮದ್, ಹಿರಿಯ ಅಧಿಕಾರಿಗಳಾದ ಉಮಾಶಂಕರ್, ಏಕರೂಪ ಕೌರ್, ತುಷಾರ್ ಗಿರಿನಾಥ್ ಮತ್ತಿತರರು ಭಾಗವಹಿಸಿದ್ದರು.



# ಡ್ರಗ್ಸ್ ಜಾಲದಲ್ಲಿ ತೊಡಗಿದ್ದ ದಂಪತಿ ಮನೆ ಮೇಲೆ ಬುಲ್ಡೋಜರ್ ಕಾರ್ಯಾಚರಣೆ!

**ಪಂಜಾಬ್:** ಡ್ರಗ್ ಜಾಲತಾಣದ ಆರೋಪ ಹೊತ್ತಿದ್ದ ದಂಂಪತಿಗಳ ಮನೆ ಮೇಲೆ ಪೊಲೀಸರು ಬುಲ್ಡೋಜರ್ ಕಾರ್ಯಾಚರಣೆ ಕೈಗೊಂಡಿದ್ದು, ಗುರುವಾರ ತಡರಾತ್ರಿ ನಾರಂಗವಾಲ್ ಗ್ರಾಮದಲ್ಲಿ ಪೊಲೀಸರು ಬುಲ್ಡೋಜರ್ ಕಾರ್ಯಾಚರಣೆ ನಡೆಸಿದ್ದು, ಪ್ರಕರಣದ ಆರೋಪಿಗಳಾದ ಪತಿ–ಪತ್ನಿಯನ್ನು ವಶಕ್ಕೆ ಪಡೆದಿದ್ದಾರೆ.

ಈ ಇಬ್ಬರ ಮೇಲೂ ಎನ್‌ಡಿಪಿಎಸ್ ಅಡಿ 3 ಪ್ರಕರಣಗಳಿವೆ. ಈ ವೇಳೆ ದಂಪತಿಗಳಿಂದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣದ ಕುರಿತು ತನಿಖೆ ಸಾಗಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಾರ್ಯಾಚರಣೆ ಬಗ್ಗೆ ಎಸ್‌ಎಸ್‌ಪಿ ಪ್ರತಿಕ್ರಿಯೆ: ಈ ಕುರಿತು ಮಾಹಿತಿ ನೀಡಿದ ಎಸ್‌ಎಸ್‌ಪಿ ಅಂಕುರ್ ಗುಪ್ತಾ, ದಂಪತಿಗಳ ವಿರುದ್ಧ ಮಾದಕವಸ್ತು ಕಳ್ಳಸಾಗಣೆಗೆ ಸಂಬಂಧಿಸಿದಂತೆ ಹಲವು ಪ್ರಕರಣಗಳು ದಾಖಲಾಗಿದ್ದವು. ಗ್ರಾಮದಿಂದ ಅವರ ಬಗ್ಗೆ ನಿರಂತರವಾಗಿ ದೂರುಗಳು ದಾಖಲಾಗಿದ್ದವು. ಈ ಹಿನ್ನೆಲೆ ಕ್ರಮ ಕೈಗೊಳ್ಳಲಾಗುತ್ತಿದ್ದು, ದಂಪತಿಯನ್ನು ವಶಕ್ಕೆ ಪಡೆಯಲಾಗಿದೆ. ಅವರ ಆಸ್ತಿ ಬಗ್ಗೆ ಪಂಚಾಯಿತಿಗೆ ಮಾಹಿತಿ ನೀಡಿ ಬುಲ್ಡೋಜರ್ ಕ್ರಮ ಕೈಗೊಳ್ಳಲಾಗಿದೆ. ದಂಪತಿ ಹೊರತಾಗಿ ಮತ್ತೊಬ್ಬ ಆರೋಪಿ ತನ್ವೀರ್‌ನನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಸಿಎಂ ಭಗವಂತ್ ಮಾನ್ ಮತ್ತು ಪಂಜಾಬ್ ಡಿಜಿಪಿ ಅವರು ರಾಜ್ಯದಲ್ಲಿ ಮಾದಕ ಕಳ್ಳ ಸಾಗಣೆ ಜಾಲದ ವಿರುದ್ಧ ಕಟ್ಟು ನಿಟ್ಟಿನ ಕ್ರಮಕ್ಕೆ ಸೂಚನೆ ನೀಡಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲಾಗಿದೆ . ಈ ಪ್ರಕರಣ ಈ ರೀತಿ ಅಕ್ರಮದಲ್ಲಿ ತೊಡಗಿರುವವರಿಗೂ ಪಾಠವಾಗಲಿದೆ ಎಂದು ಎಸ್‌ಎಸ್‌ಪಿ ತಿಳಿಸಿದ್ದಾರೆ.

ಪೊಲೀಸರ ಕ್ರಮ ಸ್ವಾಗತಿಸಿದ ಸರಪಂಚ್: ಪೊಲೀಸರ ಈ ಕ್ರಮವನ್ನು ಗ್ರಾಮದ ಸರಪಂಚ್ ಕೂಡ ಸ್ವಾಗತಿಸಿದ್ದು, ಈ ದಂಪತಿ ವಿರುದ್ಧ ಗ್ರಾಮಸ್ಥರಲ್ಲಿ ಆಕ್ರೋಶ ಕೂಡ ಇತ್ತು. ಅವರು ನನಗೆ ಕೂಡ ಕೊಲೆ ಬೆದರಿಕೆ ಹಾಕಿದ್ದರು ಎಂದರು.

ಈ ಬೆದರಿಕೆ ಹಾಕಿದ್ದ ವಿಡಿಯೋ ಸಿಎಂ ಮಾನ್ ಗಮನಕ್ಕೆ ಕೂಡ ಬಂದಿತ್ತು. ಸಿಎಂ ನೇರವಾಗಿ ಸರಪಂಚ್ ಮಂಜಿಂದರ್ ಸಿಂಗ್‌ಗೆ ಕರೆ ಮಾಡಿ ಮಾಹಿತಿ ಪಡೆದಿದ್ದರು. ಇದಾದ ಬಳಿಕ ಪೊಲೀಸರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಮಾನ್ ಅವರು ಆರೋಪಿಗಳ ವಿರುದ್ಧ ಕಠಿಣಕ್ರಮಕ್ಕೆ ಮುಂದಾಗಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಸರಪಂಚ್ ತಿಳಿಸಿದ್ದಾರೆ.

ಲೂಧಿಯಾನ ಪೊಲೀಸರಿಂದ ಕಠಿಣ ಕ್ರಮ: ಮಾದಕ ಕಳ್ಳ ಸಾಗಣೆದಾರರ ವಿರುದ್ಧ ಲೂಧಿಯಾನ ಪೊಲೀಸರು ಕಠಿಣ ಕ್ರಮ ತೆಗೆದುಕೊಂಡಿದ್ದಾರೆ. ಮೊದಲಿಗೆ ತಲ್ವಂಡಿ, ಬಳಿಕ ಬಾಯಿ ಹಿಮ್ಮತ್ ಸಿಂಗ್ ನಗರ್ ಬಳಿಕ ನಾರಂಗವಾಲ್‌ನಲ್ಲಿ ಬುಲ್ಡೋಜರ್ ಕ್ರಮ ಕೈಗೊಳ್ಳಲಾಗಿದೆ. ಡ್ರಗ್ ಡೀಲರ್ ವಿರುದ್ಧ ಪೊಲೀಸರು ಕ್ರಮಕ್ಕೆ ಮುಂದಾಗಿದ್ದು, 70 ಕ್ಕೂ ಹೆಚ್ಚು ಮಾದಕ ವಸ್ತು ಕಳ್ಳಸಾಗಣೆದಾರರ ಪಟ್ಟಿ ತಯಾರಿಸಲಾಗಿದೆ. ಅವರ ವಿರುದ್ಧವೂ ಮುಂದಿನ ದಿನಗಳಲ್ಲಿ ಇದೇ ರೀತಿಯ ಕ್ರಮ ತೆಗೆದುಕೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.



ಬಿ ಜೆ ಪಿ ನಿಯೋಗ ಇಂದು ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರರವರ ನೇತೃತ್ವದಲ್ಲಿ ಕುಮಾರ ಕೃಪಾ ಅತಿಥಿ ಗೃಹ ದಿಂದ ಸಿ ಎಂ ನಿವಾಸ ಕಾವೇರಿಗೆ ತೆರಳಿ ಬೆಂಗಳೂರು ನಗರದ ಅಭಿವೃದ್ಧಿ ಹಾಗೂ ಅನುದಾನದ ತಾರತಮ್ಯ ಕುರಿತಂತೆ ಹಲವು ಬೇಡಿಕೆಗಳ ಬಗ್ಗೆ ಚರ್ಚಿಸಿದರು. ನಿಯೋಗದಲ್ಲಿ ವಿಧಾನಸಭಾ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಸಂಸದರುಗಳಾದ ಪಿ ಸಿ ಮೋಹನ್, ತೇಜಸ್ವಿ ಸೂರ್ಯ, ಶಾಸಕರುಗಳಾದ ಕೆ, ಗೋಪಾಲಯ್ಯ,ಎಸ್ ಆರ್ ವಿಶ್ವನಾಥ್, ಮುನಿರಾಜು, ನಾರಾಯಣಸ್ವಾಮಿ, ಕೆ ಸಿ ರಾಮಮೂರ್ತಿ, ರವಿ ಸುಬ್ರಹ್ಮಣ್ಯ ಸೇರಿದಂತೆ ಹಲವು ನಾಯಕರುಗಳು ಇದ್ದರು.

# ನವೀನ ತಂತ್ರಜ್ಞಾನ: ಮತ್ತಷ್ಟು ಅಭಿವೃದ್ಧಿಪಡಿಸುವ ಅಗತ್ಯವಿದೆ; ಕರಂದ್ಲಾಜೆ



**ಯಲಹಂಕ:** ಕೃಷಿಕರ ಜೀವನೋಪಾಯ ಭದ್ರತೆ ಖಾತ್ರಿಗೆ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮೇಳ – 2025ಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಹಸಿರು ಕ್ರಾಂತಿ ಪ್ರಯತ್ನಗಳ ಮೂಲಕ ಭಾರತ ಆಹಾರ ಭದ್ರತೆ ಸಾಧಿಸಿದರೂ, 2047ರೊಳಗೆ ವಿಶ್ವದ ಆಹಾರ ಬುಟ್ಟಿಯಾಗುವ ನಿಟ್ಟಿನಲ್ಲಿ ಭಾರತ ಶಕ್ತಿಶಾಲಿ ರಾಷ್ಟ್ರವಾಗುವ ಸಾಧ್ಯತೆ ಇದೆ. ಇದನ್ನು ಸಾಧಿಸಲು, ಉತ್ಕೃಷ್ಟ ತಳಿಗಳು, ಹೆಚ್ಚಿನ ಸಾಂದ್ರತಾ ಬೆಳೆ ಪದ್ಧತಿಗಳು ಮತ್ತು ಸ್ಥಿರತೆಯಿಂದ ಯುಕ್ತವಾದ ನವೀನ ತಂತ್ರಜ್ಞಾನಗಳ ಮೂಲಕ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದರು.

ಕೃಷಿ ವಿಜ್ಞಾನಿಗಳು ಮತ್ತು ವಿಸ್ತರಣಾ ಅಧಿಕಾರಿಗಳು ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳ ಅಜಾಗರೂಕ ಬಳಕೆಯಿಂದ ಉಂಟಾಗುವ ಅಪಾಯಗಳ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ. ಇದರಿಂದ ಸುರಕ್ಷಿತ ಆಹಾರದ ಉತ್ಪಾದನೆಯನ್ನು ಖಾತ್ರಿ ಮಾಡಬಹುದು ಎಂದರು.

ಸಮಾಜದ ಆರ್ಥಿಕ ಸ್ಥಿತಿಯು ಅವಿರತ ಬದಲಾವಣೆಗಳ ಕಾರಣ, ತಕ್ಷಣದ ಅಡುಗೆ ಮತ್ತು ತಕ್ಷಣ ಸೇವನೆಗೆ ತಯಾರಾದ ಉತ್ಪನ್ನಗಳ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿದೆ. ಈ ನಿಟ್ಟಿನಲ್ಲಿ, ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧಿತ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲು ಎಂಎಸ್‌ಎಂಇ ವಲಯ ಸಹಾಯ ಮಾಡಬಹುದು ಎಂದು ಅವರು ತಿಳಿಸಿದರು.

ನೀತಿ ಆಯೋಗದ ಸದಸ್ಯ ಪ್ರೊ. ರಾಮೇಶ್ ಚಂದ್ ಮಾತನಾಡಿ, ತೋಟಗಾರಿಕೆಯ ಮೂಲಕ ಎರಡನೇ ಹಸಿರು ಕ್ರಾಂತಿಯ ಅಗತ್ಯವಿದೆ. ತೋಟಗಾರಿಕೆ ವೃದ್ಧಿ ದರವು (7%) ಕೃಷಿ ವೃದ್ಧಿ ದರಕ್ಕಿಂತ(4%) ಶೇ.3ರಷ್ಟು ಹೆಚ್ಚಿದೆ. ಈ ಕಾರಣದಿಂದ, ತೋಟಗಾರಿಕೆ ರೈತರು ಕಳೆದ ದಶಕದಲ್ಲಿ ತಮ್ಮ ಆದಾಯವನ್ನು ಈಗಾಗಲೇ ದ್ವಿಗುಣಗೊಳಿಸಿದ್ದಾರೆ. ಅಲ್ಲದೆ, ಹೆಚ್ಚಿದ ಪೋಷಕಾಂಶಗಳನ್ನು ಒಳಗೊಂಡ ಹೊಸ ತೋಟಗಾರಿಕೆ ತಳಿಗಳ ಅಭಿವೃದ್ಧಿ ಮತ್ತು ತೋಟಗಾರಿಕೆ ಉತ್ಪನ್ನಗಳ ಪರಿಷ್ಕರಣೆಯ ಅಗತ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಎಸ್.ವಿ. ಸುರೇಶ, ಶಿವಮೊಗ್ಗ ಗಂಊಖನ ಮಾಜಿ ಉಪಕುಲಪತಿ ಹಾಗೂ ಖಅಂಖ–ಖಖಊಖ, ಸಂಶೋಧನಾ ಸಲಹಾ ಸಮಿತಿಯ ಅಧ್ಯಕ್ಷ ಡಾ. ಎಂ.ಕೆ. ನಾಯಕ್ ಮತ್ತು ಐಸಿಎಆರ್, ನವದೆಹಲಿಯ ತೋಟಗಾರಿಕೆ ವಿಭಾಗದ ಸಹಾಯಕ ಮಹಾನಿರ್ದೇಶಕ ಡಾ. ವಿ.ಬಿ. ಪಟೇಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# 3–4 ತಿಂಗಳಲ್ಲಿ ಹಾಸನ – ಮಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಸಂಚಾರ ಮುಕ್ತ; ಶ್ರೇಯಸ್ ಪಟೇಲ್

**ಹಾಸನ:** ಮುಂದಿನ ಮೂರ್‍ನಾಲ್ಕು ತಿಂಗಳ ಒಳಗೆ ಹಾಸನದಿಂದ – ಮಾರನಹಳ್ಳಿವರೆಗಿನ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ಸಂಪೂರ್ಣ ಮುಗಿಯಲಿದೆ ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಗುರುವಾರ ಸ್ಥಳ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದ ಅವರು, ಮುಂದಿನ 2–3 ತಿಂಗಳಲ್ಲಿ ಮಳೆಗಾಲ ಶುರುವಾಗಲಿದೆ. ಹಿಂದೆ ಎಲ್ಲೆಲ್ಲಿ ಭೂ ಕುಸಿತ ಉಂಟಾಗಿದ್ದ ಕಡೆಗಳಲ್ಲಿ ಏನೆಲ್ಲ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂಬುದರ ಬಗ್ಗೆ ಒಂದು ತಂಡವಾಗಿ ಪರಿಶೀಲನೆ ಮಾಡಿದ್ದೇವೆ ಎಂದರು.

ಎಲ್ಲೆಲ್ಲಿ ಸಮಸ್ಯೆ ಇದೆ, ಪರಿಹಾರ ಏನು ಎಂಬುದರ ಬಗ್ಗೆ ಅವಲೋಕನ ಮಾಡಿದ್ದೇವೆ. ಬರುವ ಜೂನ್ 30 ರೊಳಗೆ ಕಾಮಗಾರಿ ಮುಗಿಸುವ ಬಗ್ಗೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಶೇ.100 ರಷ್ಟು ಭರವಸೆ ನೀಡಿದ್ದಾರೆ. ಹೆಚ್ಚೆಂದರೆ ಮತ್ತೊಂದು ತಿಂಗಳು ಮುಂದಕ್ಕೆ ಹೋಗಬಹುದು. ಒಟ್ಟಿನಲ್ಲಿ ಮುಂದಿನ 3–4 ತಿಂಗಳಲ್ಲಿ ಹೆದ್ದಾರಿ ಸಂಪೂರ್ಣ ಸಂಚಾರ ಮುಕ್ತವಾಗಲಿದೆ ಎಂದು ತಿಳಿಸಿದರು.

ಭೂ ಕುಸಿತ ತಡೆಯಲು ಒತ್ತು: ಮುಖ್ಯವಾಗಿ ಮಳೆಗಾಲದಲ್ಲಿ ದೊಡ್ಡತಪ್ಪಲು ಸೇರಿದಂತೆ ಕೆಲವು ಕಡೆ, ಭೂ ಕುಸಿತ ತಡೆಯಲು ಒತ್ತು ನೀಡಿದ್ದೇವೆ. ಹಿಂದೆ ಭೂ ಸ್ವಾಧೀನ ಮಾಡಿದವರ ಅವೈಜ್ಞಾನಿಕ ಕ್ರಮ ಹಾಗೂ ತಪ್ಪಿನಿಂದಾಗಿ ನೇರವಾಗಿ ಗುಡ್ಡ ಕಡಿದಿರುವುದರಿಂದ ಕೆಲವೆಡೆ ಕುಸಿತಕ್ಕೆ ಕಾರಣವಾಗಿದೆ. ಇದನ್ನು ತಡೆಯಲು ಇಳಿಜಾರಾಗಿ ಗುಡ್ಡ ಕತ್ತರಿಸಲು ಮತ್ತಷ್ಟು ಭೂ ಸ್ವಾಧೀನ ಮಾಡಬೇಕಿದೆ. ಅದಕ್ಕೂ ಮುನ್ನ ಕಾಫಿಗಿಡ, ಮರಗಳಿಗೆ ಪರಿಹಾರ ಕೊಡಬೇಕಿದೆ. ಇನ್ನು ಎಷ್ಟು ಮೀಟರ್ ಭೂಮಿ ಬೇಕು ಎಂಬುದರ ಬಗ್ಗೆ ಕೂಡಲೇ ಕಾರ್ಯಪ್ರವೃತ್ತರಾಗಿ ವರದಿ ಸಿದ್ದಪಡಿಸಲು ಸೂಚಿಸಿದ್ದೇನೆ ಎಂದರು.

ಈ ಮಾರ್ಗದಲ್ಲಿ ಆಗಬೇಕಿರುವ ಫ್ಲೈ ಓವರ್ ಕಾಮಗಾರಿಗೆ ಹಾಸನದ ಚನ್ನಪಟ್ಟಣ ಸರ್ಕಲ್, ರಾಜೀವ್ ಕಾಲೇಜು ಹಾಗೂ ಬಿಟ್ಟಗೋಡನಹಳ್ಳಿ ಬಳಿ ಕೊಂಚ ತಾಂತ್ರಿಕ ಸಮಸ್ಯೆ ಇದ್ದು, ಅದನ್ನು ಬಗೆಹರಿಸಿ ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದ ಸಂಸದರು, ಅಣಚಿಹಳ್ಳಿ ಫ್ಲೈ ಓವರ್ 1 ತಿಂಗಳಲ್ಲಿ, ಬೂವನಹಳ್ಳಿ ಬಳಿಯ ಫ್ಲೈ ಓವರ್ 3 ತಿಂಗಳಲ್ಲಿ ಸಂಚಾರಕ್ಕೆ ಲಭ್ಯವಾಗಲಿದೆ ಎಂದರು.

ಸಕಲೇಶಪುರ ಬಳಿಯ ದೋಣಿಗಾಲ್ ಕ್ರಾಸ್‌ನಲ್ಲಿ ಕಾಕ್ರಿಂಟ್ ರಸ್ತೆ ಮಾಡಲು ರಸ್ತೆ ಬಂದ್ ಮಾಡಲು ಕೇಳಿದ್ದಾರೆ. ಬಂದ್ ಮಾಡುವ ಮುಂಚೆ ವಾಹನ ಸವಾರರು, ಪ್ರಯಾಣಿಕರಿಗೆ



ತಿಳಿಸಲಾಗುವುದು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಪರ್ಯಾಯ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು. ಅದನ್ನು ಸಂಬಂಧಪಟ್ಟ ಮಂತ್ರಿ ಅವರಿಗೆ ಸಲ್ಲಿಸಿ 13 ಕೋಟಿ ಹಣ ಬಿಡುಗಡೆಗೆ ಮನವಿ ಮಾಡುವುದಾಗಿ ತಿಳಿಸಿದರು.

ಜಿಲ್ಲೆಯಲ್ಲಿ ಕಾಡಾನೆ ಸಮಸ್ಯೆ ಜಟಿಲ: 10 ದಿನದಲ್ಲಿ ಇಬ್ಬರು ಬಲಿಯಾಗಿದ್ದಾರೆ. ಸಾವಿಗೆ ನಾವು ಕೊಡುವ ಪರಿಹಾರ ಶಾಶ್ವತ ಅಲ್ಲ, ಅದು ಕ್ಷಣಿಕ, ಬದಲಾಗಿ ಶಾಶ್ವತ ಪರಿಹಾರ ಆಗಬೇಕು. ಅದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ ಮಾಡಬೇಕು ಎಂದು ಶ್ರೇಯಸ್ ಹೇಳಿದರು.

ಈ ವಿಚಾರದಲ್ಲಿ ಎರಡೂ ಸರ್ಕಾರಗಳ ಜವಾಬ್ದಾರಿ ಇದೆ. ಸರ್ಕಾರ, ಜನಪ್ರತಿನಿಧಿಗಳು, ಸಚಿವರು ಒಟ್ಟುಗೂಡಿ ಕೆಲಸ ಮಾಡಬೇಕಿದೆ. ಪರಸ್ಪರ ಕುಳಿತು ಚರ್ಚಿಸಿ ಬಗೆಹರಿಸಿಕೊಳ್ಳಬೇಕಿದೆ. ನಾನೂ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದೇನೆ. ಅಧಿವೇಶನದಲ್ಲೂ ದನಿ ಎತ್ತಿದ್ದೇನೆ. ಆನೆಧಾಮ ನಿರ್ಮಾಣಕ್ಕೆ ಪ್ರಸ್ತಾಪನೆ ಸಿದ್ಧವಾಗಿದೆ. ಇದಕ್ಕಾಗಿ ರಾಜ್ಯ ಬಜೆಟ್‌ನಲ್ಲಿ ಎಷ್ಟು ಅನುದಾನ ನಿಗದಿ ಮಾಡುತ್ತಾರೋ ಎಂಬುದನ್ನು ನೋಡಿಕೊಂಡು ಕೇಂದ್ರಕ್ಕೂ ಒತ್ತಡ ಹಾಕುವುದಾಗಿ ತಿಳಿಸಿದರು.

ಒಟ್ಟಿನಲ್ಲಿ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಇದರಲ್ಲಿ ರಾಜಹಕೀಯ ಬೇಡ, ಎಲ್ಲರೂ ಪಕ್ಷಾತೀತವಾಗಿ ಒಗ್ಗೂಡಿ ಕೆಲಸ ಮಾಡಬೇಕು. ಬಂದ್ ಅಥವಾ ಪ್ರತಿಭಟನೆ ಮಾಡಿದರೆ ಪರಿಹಾರ ಸಿಗಲ್ಲ. ಪಕ್ಷಾತೀತವಾಗಿ ಎಲ್ಲರೂ ಕೇಂದ್ರದ ಬಳಿಗೆ ಹೋಗೋಣ, ಪ್ರಯತ್ನ ಎಲ್ಲರ ಕಡೆಯಿಂದ ಶೇ.100 ರಷ್ಟು ಇರಬೇಕು. ಇದಕ್ಕಾಗಿ ಎಲ್ಲರೂ ಕೈ ಜೋಡಿಸುವಂತೆ ಮನವಿ ಮಾಡಿದರು.

ಹಾಗೆಯೇ ಮೃತರ ಕುಟುಂಬಕ್ಕೆ ಹಾಲಿ ನೀಡುತ್ತಿರುವ 15 ಲಕ್ಷ ಪರಿಹಾರಕ್ಕೆ ಬದಲು 25 ಲಕ್ಷ ಕೊಡಬೇಕು ಎಂದು ಮನವಿ ಮಾಡಿದ್ದೇವೆ. ಪುರಸ್ಕರಿಸುವುದು ಉಭಯ ಸರ್ಕಾರಗಳಿಗೆ ಬಿಟ್ಟಿದ್ದು ಎಂದರು.

ಮೊನ್ನೆ ಗುಜ್ಜನಹಳ್ಳಿಗೆ ಭೇಟಿ ನೀಡಿದಾಗ ಸ್ಥಳೀಯರು ಅನೇಕ ಸಮಸ್ಯೆ ಹೇಳಿಕೊಂಡಿದ್ದು, ದೊಡ್ಡ ದೊಡ್ಡ ಪ್ಲಾಂಟರ್ಸ್ ಆನೆಗಳ ಚಲನವಲನದ ಬಗ್ಗೆ ಕಾರ್ಮಿಕರಿಗೆ ತಿಳಿಸಬೇಕು. ಸಾಧ್ಯವಾದರೆ ರಜೆ ಕೊಡಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಕಾರ್ಮಿಕರನ್ನು ಕರೆತಂದು ಬಿಡುವ ವಾಹನ ವ್ಯವಸ್ಥೆ ಮಾಡಬೇಕು. ಕೆಲಸ ವೇಳೆ ಬದಲು ಮಾಡಿ, ಕಾರ್ಮಿಕರ ಹಿತ ಕಾಯಿರಿ ಎಂದು ಇದೇ ವೇಳೆ ಮನವಿ ಮಾಡಿದರು.

ಅಧಿಕಾರಿಗಳಿಗೆ ಕಟ್ಟಪ್ಪಣೆ: ಇದಕ್ಕೂ ಮುನ್ನ ಪರಿಶೀಲನೆ ವೇಳೆ 2–3 ತಿಂಗಳೊಳಗೆ ಕೆಲಸ ಪೂರ್ಣ ಮಾಡಬೇಕು, ನೀವು ಇಲ್ಲಿಯವರೆಗೆ ಮಾಡಿರುವ ಕೆಲಸ ಏನು, ಮಳೆಗಾಲ ಹತ್ತಿರ ಇದೆ. ಕೆಲವರಿಗೆ ಇನ್ನೂ ಪರಿಹಾರ ನೀಡಿಲ್ಲ, ಯಾಕೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ನೀವು ನಿಮ್ಮ ಕಾರಣ ಹೇಳಬೇಡಿ, ಜನರ ಹಿತದೃಷ್ಟಿಯ ಬಗ್ಗೆಯೂ ಗಮನ ಹರಿಸಿ ಎಂದು ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು.

## ಮೊದಲ ಪುಟದಿಂದ

### ಬಿಎಸ್‌ವೈಗೆ ಸಮನ್ಸ್

ಯಡಿಯೂರಪ್ಪ ಅವರಿಗೆ ಜಾಮೀನು ನೀಡಿದ್ದಲ್ಲದೇ ಅವರ ವಿರುದ್ಧ ಬಲವಂತದ ಕ್ರಮ ಬೇಡವೆಂದು ಹೇಳಿತ್ತು. ಆದರೆ ಪ್ರಕರಣ ರದ್ದುಮಾಡಿರಲಿಲ್ಲ. ಈ ಸಂಬಂಧ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಲಯ ಯಡಿಯೂರಪ್ಪ ಅವರಿಗೆ ಸಮನ್ಸ್ ಜಾರಿ ಮಾಡಿದೆ

### ಜನರ ದಿಕ್ಕು ತಪ್ಪಿಸಬೇಡಿ

ತಮಿಳುನಾಡಿನ ಡಿಎಂಕೆ ಸರ್ಕಾರದ ಆಧಾರ ರಹಿತ ಅಪಪ್ರಚಾರದ ತಾಳಕ್ಕೆ ಕರ್ನಾಟಕದ ಮುಖ್ಯಮಂತ್ರಿಗಳು ಹೆಜ್ಜೆ ಹಾಕುತ್ತಿರುವಂತಿದೆ ಎಂದು ಆರೋಪಿಸಿದ್ದಾರೆ.

ಈಗಾಗಲೇ ಐತಿಹಾಸಿಕ ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದು ಮಹತ್ವದ ಹೆಜ್ಜೆ ಇಡಲಾಗಿದೆ, ಇದರ ಜತೆ ಜತೆಗೇ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿದು ಮಹತ್ವದ ಸುಧಾರಣೆ ತರಲು ಕ್ಷೇತ್ರ ಮರು ವಿಂಗಡಣೆಯ ಕಾರ್ಯವನ್ನು ಚುರುಕುಗೊಳಿಸಿದೆ ಎಂದು ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದಾರೆ. ನರೇಂದ್ರ ಮೋದಿ ಅವರು ದೇಶದ ಪ್ರಧಾನಿಯಾದ ನಂತರ ದೇಶದ ಅಭಿವೃದ್ಧಿಯು ದಿನದಿಂದ ದಿನಕ್ಕೆ ದಾಪುಗಳನ್ನಿಡುತ್ತಿದೆ. ರಾಷ್ಟ್ರಕಟ್ಟುವ ಸಂಕಲ್ಪ ಭಾರತೀಯರಲ್ಲಿ ಗಟ್ಟಿಗೊಳ್ಳುತ್ತಿದೆ. ಇದರ ಪರಿಣಾಮ ಮೂರನೇ ಅವಧಿಗೂ ಪ್ರಧಾನಿ ನರೇಂದ್ರ ಮೋದಿಜೀ ಅವರ ನೇತೃತ್ವದ ಎನ್‌ಡಿಎ ಸರ್ಕಾರವನ್ನು ದೇಶದ ಜನತೆ ಮತ್ತೆ ಅಧಿಕಾರಕ್ಕೆ ತಂದಿದ್ದಾರೆ ಎಂದಿದ್ದಾರೆ. ಮೋದಿ ಅವರ ಆಡಳಿತ ಅವಧಿಯಲ್ಲಿ ದೇಶ ಐತಿಹಾಸಿಕ ನಿರ್ಧಾರ ಹಾಗೂ ಯೋಜನೆಗಳನ್ನು ಕಾರ್ಯಗತಗೊಳಿಸಿದೆ. ಅಯೋಧ್ಯೆಯ ರಾಮ ಮಂದಿರ, ಆರ್ಟಿಕಲ್ 370 ರದ್ದತಿ, ಭಾರತದ ಸಾರ್ವಭೌಮತ್ವದ ಧೀಮಂತಿಕೆಯನ್ನು ಸಾಕ್ಷೀಕರಿಸಿತು. ಇದನ್ನೆಲ್ಲ ಸಹಿಸಿಕೊಳ್ಳಲಾಗದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಅಪಪ್ರಚಾರ ನಡೆಸುವುದು, ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟು ಮಾಡುವುದನ್ನು ಬಿಟ್ಟರೆ ಇನ್ಯಾವ ರಚನಾತ್ಮಕ ಸಲಹೆ ಹಾಗೂ ಸಹಕಾರಗಳನ್ನು ನೀಡುವ ಔದಾರ್ಯತೆ ತೋರದೆ ತಮ್ಮ ಕುಬ್ಜತನವನ್ನು ಹಾಗೂ ಅಸೂಯೆಯನ್ನು ಪ್ರದರ್ಶಿಸುತ್ತಾ ಬಂದಿವೆ ಎಂದು ವಿಜಯೇಂದ್ರ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

### ಸಡಿಲಿಸಿದ ಹೈಕೋರ್ಟ್

'ಜಾಮೀನು ಪಡೆಯುವಾಗ ಅನಾರೋಗ್ಯದ ಕಾರಣ ನೀಡಿದ್ದರು. ಈಗ ದೇಶದೆಲ್ಲೆಡೆ ಸುತ್ತಾಡಲು ಬಯಸುತ್ತಿದ್ದಾರೆ' ಎಂದು ಪ್ರಸನ್ನ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಇದೀಗ ಹೈಕೋರ್ಟ್ ದರ್ಶನ್ ಅವರ ಜಾಮೀನು ಷರತ್ತುಗಳನ್ನು ಸಡಿಲಿಸಿದೆ. 'ಕೋರ್ಟ್ ಅನುಮತಿಯಿಲ್ಲದೇ ದೇಶ ಬಿಟ್ಟು ತೆರಳುವಂತಿಲ್ಲ' ಎಂದು ಕೋರ್ಟ್ ಹೇಳಿದೆ.

### ಪಾಂಡೆ ನೂತನ ಛೇರ್ಮನ್

ಮಾಡಿದ್ದಾರೆ.ತುಹಿನ್ ಕಾಂತ ಪಾಂಡೆ ಅವರು ಸೆಬಿ ಛೇರ್ಮನ್ ಆಗಿ ನೇಮಕವಾಗುವ ಮುನ್ನ ಕಂದಾಯ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿದ್ದರು. ಅದಕ್ಕೂ ಮುನ್ನ ಹೂಡಿಕೆ, ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ, ಸರ್ಕಾರಿ ಉದ್ದಿಮೆಗಳ ಇಲಾಖೆ ಹಾಗು ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಈ ಮೂರು ಇಲಾಖೆಗಳಿಗೆ ಕಾರ್ಯದರ್ಶಿಯಾಗಿದ್ದರು. ಅದಕ್ಕೂ ಪೂರ್ವದಲ್ಲಿ ಅವರು ನಾಗರಿಕ ವಿಮಾನಯಾನ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು

### ಪಿಯು ಪರೀಕ್ಷೆ ಆರಂಭ

ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಮಾತ್ರ ಇರಿಸಿಕೊಳ್ಳಬಹುದು. ಎಲ್ಲಾ ಪರೀಕ್ಷಾ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್ ಬಳಕೆ ನಿಷೇಧ ವಿಧಿಸಲಾಗಿದೆ.

ಎಲೆಕ್ಟ್ರಾನಿಕ್ ಸಾಮಾಗ್ರಿಗಳನ್ನು ಒಯ್ಯುವುದು ಮತ್ತು ಬಳಸುವುದನ್ನು ನಿಷೇಧಿಸಿದೆ. ನಿಷೇಧಿತ ವಲಯದಲ್ಲಿ ಯಾವುದೇ ರೀತಿಯ ಸ್ಫೋಟಕ ವಸ್ತುಗಳನ್ನು ಕೊಂಡು ಹೋಗುವುದನ್ನು ಹಾಗೂ ಇನ್ನಿತರ ಮಾರಕ ಆಯುಧಗಳನ್ನು ಹೊಂದುವುದನ್ನು ನಿಷೇಧಿಸಿದೆ. ಪರೀಕ್ಷೆ ಪ್ರಾರಂಭವಾಗುವ ಒಂದು ಗಂಟೆ ಮುಂಚಿತವಾಗಿ ಹಾಗೂ ಪರೀಕ್ಷೆ ಮುಗಿಯುವವರೆಗೆ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿರುವ ಜೆರಾಕ್ಸ್ ಅಂಗಡಿಗಳು ಕಾರ್ಯನಿರ್ವಹಿಸುವುದನ್ನು ಮತ್ತು ಈ ವ್ಯಾಪ್ತಿಯಲ್ಲಿ ಧ್ವನಿವರ್ಧಕ ಬಳಕೆಯನ್ನು ನಿಷೇಧಿಸಿದೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಬಿಎಂಟಿಸಿ ಸಾಮಾನ್ಯ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಮಾರ್ಚ್ 21ರಿಂದ ಏಪ್ರಿಲ್ 4ರವರೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆ ನಡೆಯಲಿದೆ.

### ಬರ್ಬರ ಕೊಲೆ

ಪರಿಶೀಲನೆ ನಡೆಸಿದ್ದಾರೆ. ಕೊಲೆಗೆ ಕಾರಣ ಪೊಲೀಸ್ ತನಿಖೆಯಿಂದ ತಿಳಿದು ಬರಬೇಕಿದೆ.

### ಚಾಲಕ ಸ್ಥಳದಲ್ಲೇ ಸಾವು

ಖಾನಾಪೂರ ಗ್ರಾಮವನ್ನು ದಾಟಿ ತಡಿಬಿಡಿ ಗ್ರಾಮವು ಅನತಿ ದೂರದಲ್ಲಿರುವಾಗ ಎದುರಿಗೆ ಒಮ್ಮೆಲೆ ಕಾರಿಗೆ ಎಮ್ಮೆ ಅಡ್ಡ ಬಂದ ಕಾರಣ ಎಮ್ಮೆಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಕಾರು ಚಾಲಕ ಕಾರನ್ನು ಬಲಕ್ಕೆ ತಿರುಗಿಸಿದಾಗ ಎದುರಿಗೆ ಬಂದ ಲಾರಿಗೆ ನೇರವಾಗಿ ಡಿಕ್ಕಿ ಹೊಡೆದ ಪರಿಣಾಮ ಕಾರು ಲಾರಿಯ ಒಳಗಡೆ ನುಗ್ಗಿ ನಜ್ಜುಗುಜ್ಜಾಗಿದೆ. ಈ ಘಟನೆಯಲ್ಲಿ ಶಹಾಪುರ ತಾಲ್ಲೂಕಿನ ಕನ್ನೆಕೌಳುರ ಗ್ರಾಮದ ಬಸಲಿಂಗಪ್ಪ(ಸೂರಿ) ಮುಕುಂದಪ್ಪ ಪೂಜಾರಿ (27) ಎಂಬ ಕಾರು ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ವಡಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಿಎಸ್‌ಐ ಮೆಹಬೂಬ ಅಲಿ ತನಿಖೆ ಕೈಗೊಂಡಿದ್ದಾರೆ.

### ಆತ್ಮಹತ್ಯೆ ಶಂಕೆ

ನಡೆಸುತ್ತಿದ್ದಾರೆ. ತುಮಕೂರು: ಕುಣಿಗಲ್ ಬಳಿಯ ದೊಡ್ಡಕೆರೆಯಲ್ಲಿ ಮಹಿಳಾ ಟೆಕ್ಕಿ ಮೃತದೇಹ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಕುಣಿಗಲ್ ತಾಲೂಕಿನ ಸೊಬಗಾನಹಳ್ಳಿ ನಿವಾಸಿ ಸುಮಾ ಮೃತ ದುರ್ದೈವಿ. ಟೆಕ್ಕಿ ಸುಮಾ ಅವರು ಬೆಂಗಳೂರಿನಲ್ಲಿ ಸಾಫ್ಟವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಟೆಕ್ಕಿ ಸುಮಾ ಗುರುವಾರ (ಫೆ.27) ಬೆಂಗಳೂರಿನಿಂದ ಗ್ರಾಮಕ್ಕೆ ವಾಪಸ್ ಬಂದಿದ್ದರು. ಸಂಜೆ ಹೊತ್ತಿಗೆ ಕೆರೆ ಬಳಿ ಸುಮಾರ ಬ್ಯಾಗ್, ಮೊಬೈಲ್, ಬಸ್ ಟಿಕೆಟ್, ಚಪ್ಪಲಿ ಸಿಕ್ಕಿವೆ.

ಇದರಿಂದ ಅನುಮಾನಗೊಂಡ ಸ್ಥಳೀಯರು ಸುಮಾರ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ. ವಿಚಾರ ತಿಳಿದು ಸ್ಥಳಕ್ಕೆ ಸುಮಾರ ಕುಟುಂಬಸ್ಥರು, ಅಗ್ನಿಶಾಮಕದಳ ಸಿಬ್ಬಂದಿ ಮತ್ತು ಪೊಲೀಸರು ದೌಡಾಯಿಸಿದ್ದಾರೆ. ಗುರುವಾರ ಸಂಜೆಯಿಂದ ಸುಮಾಗಾಗಿ ಕೆರೆಯಲ್ಲಿ ಅಗ್ನಿಶಾಮಕದಳ ಸಿಬ್ಬಂದಿ ಹುಡುಕಾಡಿದ್ದಾರೆ. ಆದರೆ, ಸುಮಾ ಸಿಕ್ಕಿರಲಿಲ್ಲ.

# ಭೂ ರಕ್ಷಣೆಗೆ ಪ್ರಾಮಾಣಿಕರ ತಂಡ ರಚನೆ



**ಮುಳಬಾಗಿಲು:** ದೇವರಾಯ ಸಮುದ್ರ ಕಂದಾಯ ವ್ಯಾಪ್ತಿಯ ಸಾವಿರಾರು ಕೋಟಿ ಬೆಲೆ ಬಾಳುವ ನೂರಾರು ಎಕರೆ ಸರ್ಕಾರಿ ಕಲ್ಲುಬಂಡೆಗಳನ್ನು ಭೂ ಗಳ್ಳರ ಕಪಿಮುಷ್ಠಿಯಿಂದ ರಕ್ಷಣೆ ಮಾಡಲು ವಿಶೇಷ ಪ್ರಾಮಾಣಿಕ ಅಧಿಕಾರಿಗಳ ತಂಡ ರಚನೆ ಮಾಡಬೇಕು ಎಂದು ರೈತ ಸಂಘದಿಂದ ಶಿರಸ್ತೇದಾರ್ ಕೊಂಡಪ್ಪರವರಿಗೆ ಮನವಿ ನೀಡಿ ಒತ್ತಾಯಿಸಲಾಯಿತು.

ರಾಷ್ಟ್ರೀಯ ಹೆದ್ದಾರಿ 75ರ ಪಕ್ಕದಲ್ಲಿರುವ ನೂರಾರು ಎಕರೆ ಕಲ್ಲುಬಂಡೆಗಳಿಗೆ ರಾಜಾರೋಷವಾಗಿ ಕಂದಾಯ ಅಧಿಕಾರಿಗಳ ಭಯವಿಲ್ಲದೆ ಬೆಂಗಳೂರು ಭೂಗಳ್ಳರು ರಾತ್ರೋ ರಾತ್ರಿ ಕಾಂಪೌಡ್‌ಗಳನ್ನು ನಿರ್ಮಿಸಿ ಕೋಟಿ ಕೋಟಿ ಹಣಕ್ಕೆ ಸರ್ಕಾರಿ ಕಲ್ಲುಬಂಡೆಗಳನ್ನೇ ಮಾರಾಟ ಮಾಡುತ್ತಿದ್ದರು ಕ್ರಮ ಕೈಗೊಳ್ಳಬೇಕಾದ ಕಂದಾಯ ಅಧಿಕಾರಿಗಳು ಭೂ ಮಾಪಿಯ ದಂದೆಕೋರರ ಬೆದರಿಕೆಗೆ ನಾಪತ್ತೆ ಆಗಿದ್ದಾರೆಂದು ರೈತ ಸಂಘದ ರಾಜ್ಯ ಉಪಾದ್ಯಕ್ಷ ಕೆ.ನಾರಾಯಣಗೌಡ ಅಧಿಕಾರಿಗಳ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮೀಣ ಸೇವೆ ಮಾಡಿ ಸರ್ಕಾರಿ ಆಸ್ತಿಗಳನ್ನು ರಕ್ಷಣೆ ಮಾಡಿ ಮುಂದಿನ ಜಾನುವಾರುಗಳಿಗೆ ಹಾಗೂ ಕೃಷಿ ಭವಿಷ್ಯಕ್ಕೆ ಮೀಸಲಿಡಬೇಕಾದ ಕಂದಾಯ ಅಧಿಕಾರಿಗಳು ಸರ್ಕಾರಿ ಆಸ್ತಿಗಳಿಗೆ ನಕಲಿ ದಾಖಲೆಗಳನ್ನು ಸೃಷ್ಠಿ ಮಾಡಿ ರಿಯಲ್ ಎಸ್ಟೇಟ್ ದಂದೆ ಮಾಡುತ್ತಿರುವುದಕ್ಕೆ ಕಲ್ಲುಬಂಡೆಗಳಿಗೆ ಕಾಂಪೌಂಡ್ ನಿರ್ಮಿಸಿರುವುದೇ ಉದಾಹರಣೆ ಆಗಿದೆ ಎಂದರು.

ಸರ್ವೆ ನಂ.134ರಲ್ಲಿ ಭೋವಿ ಇನಾಂತಿ ಸೇರಿದಂತೆ 45 ಎಕರೆ ಕಲ್ಲುಬಂಡೆಗಳಿದ್ದರೂ ಬೆಂಗಳೂರು ಮೂಲದ ಪಿ.ಬಾಬು ಎಂಬುವವರು ಕಾಂಪೌಡ್ ನಿರ್ಮಿಸುತ್ತಿದ್ದರೂ ಅಧಿಕಾರಿಗಳ ಮೌನವೇಕೆ ಜೊತೆಗೆ ಸರ್ವೆ ನಂ. 115 ರಲ್ಲಿ 85 ಎಕರೆ ಕಲ್ಲುಬಂಡೆಗಳಿದ್ದು, ಅದರಲ್ಲೂ ಸಹ ರಾಜೇಂದ್ರಗೌಡ ಎಂಬುವವರು 4 ಎಕರೆ ಜಮೀನಿನ ಜೊತೆಗೆ ಸುತ್ತಮುತ್ತಲೂ ಇರುವ 10 ಎಕರೆ ಸಮತಟ್ಟು ಮಾಡಿಕೊಂಡು ಕೆರೆಗೆ ಹರಿದು ಹೋಗುವ ಮೂಲ ಕಾಲುವೆಯ ಕಲ್ಲುಬಂಡೆಗಳ ಮೇಲಿದ್ದ ನೀಲಗಿರಿ ಮರಗಳನ್ನು ಕಟಾವು ಮಾಡಿದ್ದರೂ ಅಧಿಕಾರಿಗಳ ಮೌನವೇಕೆ ಎಂದು ಪ್ರಶ್ನೆ ಮಾಡಿದರು.

ಜಿಲ್ಲಾ ಕಾರ್ಯದ್ಯಕ್ಷ ಹೆಬ್ಬಣಿ ಆನಂದ್‌ರೆಡ್ಡಿ ಮಾತನಾಡಿ ಸರ್ಕಾರ ಕೈಗಾರಿಕೆಗೆ 1800 ಎಕರೆ ಜಮೀನನ್ನು ದೇವರಾಯಸಮುದ್ರ ಕಂದಾಯ ವ್ಯಾಪ್ತಿಯಲ್ಲಿ ಗುರುತಿಸಿದ್ದು, ಇದನ್ನೇ ಬಂಡವಾಳವಾಗಿಸಿಕೊಂಡಿರುವ ಬೆಂಗಳೂರು ಭೂಗಳ್ಳರು ಕಂದಾಯ ಅಧಿಕಾರಿಗಳನ್ನು ಕೈ ಕಟ್ಟಿಕೊಂಡು ಸ್ಥಳಿಯ ಅಮಾಯಕ ರೈತರ ಹೆಸರಿನಲ್ಲಿ ನಕಲಿ ದಾಖಲೆ ಸಾಗುವಳಿ ಚೀಟಿಗಳನ್ನು ಸೃಷ್ಠಿಸಿಕೊಂಡು ಕೋಟಿ ಕೋಟಿ ಬೆಲೆ ಬಾಳುವ ನೂರಾರು ಎಕರೆ ಕಲ್ಲುಬಂಡೆಗಳನ್ನು ಮಾರಾಟಕ್ಕಿಟ್ಟಿರುವುದು ಯಾವ ನ್ಯಾಯ ಎಂದು ಪ್ರಶ್ನೆ ಮಾಡಿದರು.

1 ವಾರದೊಳಗೆ ದೇವವರಾಯಸಮುದ್ರ ಕಂದಾಯ ವ್ಯಾಪ್ತಿಯ ಸಾವಿರಾರು ಕೋಟಿ ಬೆಲೆ ಬಾಳುವ ನೂರಾರು ಎಕರೆ ಸರ್ಕಾರಿ ಕಲ್ಲುಬಂಡೆಗಳನ್ನು ಭೂಗಳ್ಳರ ಕಪಿಮುಷ್ಠಿಯಿಂದ ರಕ್ಷಣೆ ಮಾಡಲು ಪ್ರಮಾಣಿಕ ಅಧಿಕಾರಿಗಳ ತಂಡವನ್ನು ರಚನೆ ಮಾಡಬೇಕು ಇಲ್ಲವಾದರೆ ದಾಖಲೆಗಳ ಸಮೇತ ಕಂದಾಯ ಮಂತ್ರಿಗಳ ಮನೆ ಮುಂದೆ ಸರ್ಕಾರಿ ಆಸ್ತಿಗಳನ್ನು ಉಳಿಸುವ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಕೆಯೊಂದಿಗೆ ಮನವಿ ನೀಡಿ ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಶಿರಸ್ತೆದಾರ್ ಕೊಂಡಪ್ಪರವರು ತಹಶೀಲ್ದಾರ್‌ರವರ ಗಮನಕ್ಕೆ ತಂದು ಸರ್ವೆ ಮಾಡಿಸಿ ಭೂ ಗಳ್ಳರ ವಿರುದ್ದ ಕ್ರಮ ಕೈಗೊಳ್ಳುವ ಭರವಸೆಯನ್ನು ನೀಡಿದರು.

ಮನವಿ ನೀಡುವಾಗ ಜಿಲ್ಲಾದ್ಯಕ್ಷ ಈಕಂಬಳ್ಳಿ ಮಂಜುನಾಥ್, ಸುಪ್ರೀಂ ಚಲ, ಮುನಿರಾಜು, ತಾಲ್ಲೂಕಾದ್ಯಕ್ಷ ಯಲುವಳ್ಳಿ ಪ್ರಭಾಕರ್, ಆಂಬ್ಲಿಕಲ್ ಮಂಜುನಾಥ್, ರಾಜೇಶ್, ಪಾರುಕ್‌ಪಾಷ, ಭಾಸ್ಕರ್ ಜುಬೇರ್ ಪಾಷ, ಶ್ರೀನಿವಾಸ್ ಮುಂತಾದವರಿದ್ದರು.

# ಹಿಂದೂ ಧರ್ಮದಲ್ಲಿ ಮಹಾಶಿವರಾತ್ರಿಗೆ ವಿಶೇಷವಾದ ಮಹತ್ವವಿದೆ



**ಮಾಗಡಿ:**ಸನಾತನ ಹಿಂದೂ ಧರ್ಮದಲ್ಲಿ ಮಹಾ ಶಿವರಾತ್ರಿಗೆ ವಿಶೇಷವಾದ ಮಹತ್ವವಿದೆ ಎಂದು ಗುಮ್ಮಸಂದ್ರ ಶ್ರೀ ರುದ್ರಮುನೇಶ್ವರ ಮಠದ ಡಾ.ಚಂದ್ರಶೇಖರ ಸ್ವಾಮೀಜಿ ಹೇಳಿದರು.

ತಾಲೂಕಿನ ಗುಮ್ಮಸಂದ್ರ ರುದ್ರಮುನ್ನೇಶ್ವರ ಮಠದಲ್ಲಿ ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಶಿವರಾತ್ರಿ ಜಾಗರಣೆ ಕಾರ್ಯಕ್ರಮ ಹಾಗೂ ರುದ್ರಮುನೇಶ್ವರ ಶ್ರೀ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿವನಾಮ ಸ್ಮರಣೆಯಿಂದ ಮುಕ್ತಿದಾರಿ, ಜಾಗರಣೆ, ಹರಿಕತೆ ನಂತರ ನಡೆಯುವ ಆರಾಧನೆ ಬೇರೆಲ್ಲೂ ನಡೆಯುವುದಿಲ್ಲ ತಾಲೂಕಿನ ಮಠಮಾನ್ಯಗಳಲ್ಲಿ, ಶಿವಾಲಯಗಳಲ್ಲಿ ಅನ್ನಸಂತರ್ಪಣೆ ಅವಿರತವಾಗಿ ನಡೆಯುವುದು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ಅಷ್ಟು ಮಹತ್ವ ಮಹಾ ಶಿವರಾತ್ರಿಗೆ ಇದೆ ಎಂದರು.

ಶರಣರು ಶಿವಪೂಜೆಯಿಂದ ಸಕಲರಿಗೂ ಲೇಸನ್ನು ಬಯಸಿದರು. ಶರಣರ ಹಾದಿಯಲ್ಲಿ ನಡೆದಾಗಮಾತ್ರ ಶಿವನ ದರ್ಶನವಾಗುತ್ತದೆ ಮನುಷ್ಯನ ಜನ್ಮ ಪಾವನವಾಗುತ್ತದೆ, ಆಧುನಿಕ ಪ್ರಪಂಚದಲ್ಲಿ ಆಡಂಬರದ ಪೂಜೆಗಳು ನಡೆಯುತ್ತಿವೆ, ಇದು ವಿಪರ್ಯಾಸದ ಸಂಗತಿ, ಧಾರ್ಮಿಕ ಆಚರಣೆಗಳು ಜೀವನದ ಮೌಲ್ಯವನ್ನು ಎತ್ತಿಹಿಡಿಯುತ್ತವೆ. ಸಮಾಜದಲ್ಲಿ ಸಂಸ್ಕಾರ, ಸಂಸ್ಕೃತಿ, ಆಚಾರ, ವಿಚಾರಬೆಳೆಸಿಕೊಂಡು ಸಾಮಾಜಿಕ ಮೌಲ್ಯವನ್ನು ಕಾಪಾಡಬೇಕು. ಮನುಷ್ಯನ ಭಕ್ತಿ ಶಿವನಿಗೆ ಅರ್ಪಿತವಾಗಬೇಕು ಆಗ ಮಾತ್ರ ಶಿವನ ಸಾಕ್ಷಾತ್ಕಾರವಾಗುತ್ತದೆ ಎಂದರು.

ಮನುಷ್ಯ ಸರಳ ಜೀವನವನ್ನು ರೂಢಿಸಿಕೊಳ್ಳಬೇಕು ಮನುಷ್ಯನಿಗೆ ಶಾಂತಿ, ನೆಮ್ಮದಿ ಸಿಗಬೇಕಾದರೆ ಶಿವನ ಧ್ಯಾನದಿಂದ ಮಾತ್ರ ಸಾಧ್ಯ. ಪರಮಾತ್ಮನನ್ನು ನಾವು ಶಿವನಲ್ಲಿ ಕಾಣಬಹುದಾಗಿದೆ.

ಶಿವನ ಆರಾಧನೆಯಿಂದ ಮನುಷ್ಯನಿಗೆ ಮುಕ್ತಿ ಸಿಗುತ್ತದೆ, ಈ ರೀತಿ ಬದುಕಬೇಕಾದ ಅವಶ್ಯಕತೆ ಇದೆ, ನಾವೆಲ್ಲರೂ ಭಕ್ತಿ ಮಾರ್ಗದಲ್ಲಿ ನಡೆಯಬೇಕು, ನ್ಯಾಯ, ನೀತಿ, ಧರ್ಮವನ್ನು ಪಾಲನೆ ಮಾಡಬೇಕು, ಪ್ರಕೃತಿ ದತ್ತಪರಿಸರ ಸಂರಕ್ಷಣೆಗೆ ಮುಂದಾಗ ಬೇಕು ಆಗಮಾತ್ರ ಮಾನವ ಜನ್ಮ ಸಾರ್ಥಕ ಬದುಕಿಗೆ ನಾಂದಿಯಾಗುತ್ತದೆ, ಕೆಂಪೇಗೌಡರ ನಾಡು ಮಾಗಡಿಯಲ್ಲಿನ ಶಿವನ ದೇವಾಲಯಗಳ ಸಮಗ್ರ ಅಭಿವೃದ್ದಿಗೆ ಸರಕಾರ ಮುಂದಾಗಬೇಕು ಈ ನಿಟ್ಟನಲ್ಲಿ ಸಂಬಂಧ ಪಟ್ಟ ಅಧಿಕಾರಿಗಳಿಗೆ, ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.

ಬಡವರ್ಗದ ಮಕ್ಕಳ ಮದುವೆ ವಿವಾಹಕ್ಕಾಗಿ ಶ್ರೀಮಠದ ವತಿಯಿಂದ ಡಾ.ಶಿವಕುಮಾರ ಶಿವಯೋಗಿಗಳ ಭವನ ನಿರ್ಮಿಸಿದ್ದು ರಿಯಾಯಿತಿ ದರದಲ್ಲಿ ಬಾಡಿಗೆ ನೀಡಲು ಸಿದ್ದಗೊಂಡಿದೆ ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಬೆಟ್ಟದಹಳ್ಳಿ ಗವಿಮಠದ ಚಂದ್ರಶೇಖರ ಸ್ವಾಮೀಜಿ ಮಾತನಾಡಿ, ಶಿವರಾತ್ರಿ ಎಂದರೆ ವಸಂತಕಾಲ ನಾಂದಿಯಾಗಿ ಪ್ರಕೃತಿ ವಿಶೇಷತೆ ಸೂಚಿಸುತ್ತದೆ.

ಭೂಮಿ. ನೀರು ಕಲುಷಿತವಾಗುತ್ತಿದೆ ಪ್ರಕೃತಿ ಸುಂದರಗೊಳಿಸಲು ಗಿಡಮರಗಳು ಬೆಳೆಸಿ ಇದರಿಂದ ಪ್ರಕೃತಿಗೆ ಕೊಡುಗೆ ನೀಡಿ. ವರ್ಷಕ್ಕೆ ಹತ್ತಾರು ಹಬ್ಬಗಳಲ್ಲಿ ಶಿವರಾತ್ರಿ ಹಬ್ಬ ವಿಶೇಷ ಶಿವ ಸ್ಮರಣೆಮಾಡಿದರೆ ಬದುಕು ಸಾರ್ಥಕತೆಯಾಗುತ್ತದೆ.

ಶಿವನ ಸ್ವರೂಪಿಗಳಾಗಿ ಭಕ್ತಿ, ಶ್ರದ್ದೆಯಿಂದ ಆಚರಿಸಿ ಪ್ರಕೃತಿ ಉಳಿಸಲು ಸಂಕಲ್ಪಮಾಡಿ. ಕೇಂದ್ರ ಮತ್ತು ರಾಜ್ಯ ಸರಕಾರ ಶುದ್ದ ನೀರು ಕೊಡಲು ಸಾಧ್ಯವಾಗುತ್ತಿಲ್ಲ. ಹೈಟೆಕ್ ಸಂಸ್ಕೃತಿಯಿಂದ ನೀರು, ಗಾಳಿ, ಆಕಾಶ ಹಾಳಾಗಿದೆ. ಸರಳ ಬದುಕು ರೂಢಿಸಿಕೊಳ್ಳಿ, ಸಂಭಂಧಗಳಿಗೆ ಬೆಲೆ ಇಲ್ಲದಂತಾಗಿ ದೇಶ ಕಲುಷಿತ ವಾತಾವರಣ ಸೃಷ್ಟಿಯಾಗುತ್ತಿದೆ. ಸಂಸ್ಕಾರ, ಸಂಸ್ಕೃತಿ ಕರ್ನಾಟಕದಲ್ಲಿ ಆಸುಹೊಕ್ಕಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಒಂದು ನೂರು ಗ್ರಂಥಗಳ ಅಭ್ಯಾಸ ಸಿಗುತ್ತದೆ. ಲಿಂಗ ಪೂಜೆಗಿಂತ ಜಂಗಮಾರ್ಚನೆ ಮುಖ್ಯ. ಪವಿತ್ರವಾದ ಮನಸ್ಸು ಮನೆಯನ್ನು ಸ್ವಚ್ಚಗೊಳಿಸುತ್ತದೆ ಎಂದರು.

**ಕರ್ನಾಟಕ ರಾಜ್ಯ ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಪ್ರಸನ್ನ ಗೌಡ ರುದ್ರಮುನೇಶ್ವರ ಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಕಳೆದ 15 ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸೇವೆಸಲ್ಲಿಸಿಕೊಂಡು ಬಂದಿರುವುದನ್ನು ಶ್ರೀಮಠ ಗುರುತಿಸಿ ರುದ್ರಮುನೇಶ್ವರ ಶ್ರೀ ಪ್ರಶಸ್ತಿ ಪ್ರಧಾನ ಮಾಡಿರುವುದರಿಂದ ಮತಷ್ಟು ಜವಬ್ದಾರಿ ಹೆಚ್ಚಿಸಿದೆ ಎಂದರು.**

**ಬಿಡದಿ ಮಠದ ಹುಚ್ಚಪ್ಪ ಸ್ವಾಮೀಜಿ, ಕಿರಿಯ ಸ್ವಾಮೀಜಿ ಓಂಕಾರ ಸ್ವಾಮೀಜಿ, ವೀರಶೈವ ಬ್ಯಾಂಕ್ ನಿರ್ದೇಶಕರಾದ ಶಿವರಾಜು, ಎಂ.ಎಸ್.ಸಿದ್ದಲಿಂಗೇಶ್ವರ್, ವಕೀಲ ಪ್ರಕಾಶ್, ಎಂ.ಎಸ್. ಉಮಾಮಹೇಶ್ವರ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟದ ಜಿಲ್ಲಾಧ್ಯಕ್ಷ ಆನಂದ್, ಗೌರವಾಧ್ಯಕ್ಷ ಆಚಾರಿ ಮಂಜುನಾಥ್, ತಾ.ಅಧ್ಯಕ್ಷ ವೆಂಕಟೇಶ್, ಮಹದೇವಸ್ವಾಮಿ, ಗ್ರಾ.ಪಂ. ಸದಸ್ಯ ಶಿವಕುಮಾರು, ಕೆ.ಮಲ್ಲಣ್ಣ, ಹಂಸ ಮೆಡಿಕಲ್ ಮೋಹನ್, ಬಸವರಾಜಪ್ಪ, ವೀರಲಿಂಗಯ್ಯ ,ಶಶಿಧರ್, ಇತರರು ಇದ್ದರು.**

# ಶಿವನುಲಿಂಗ ಸ್ವರೂಪವಾಗಿ ಧರೆಗೆ ಉದ್ಬವವಾದ ದಿನ ಮಹಾಶಿವರಾತ್ರಿ



**ಕೊರಟಗೆರೆ:** ಶಿವನುಲಿಂಗ ಸ್ವರೂಪವಾಗಿಧರೆಗೆಉದ್ಬವವಾದ ದಿನವನ್ನು ಮಹಾಶಿವರಾತ್ರಿ ಹಬ್ಬವನ್ನಾಗಿಆಚರಿಸಲಾಗುತ್ತಿದ್ದು ಭಕ್ತರು ಉಪವಾಸ ಮತ್ತುಜಾಗರಣೆಯ ವ್ರತವನ್ನು ಮಾಡಲಿದ್ದುಇದು ಸಾವಿರಾರು ವರ್ಷಗಳ ಸಂಸ್ಕೃತಿಎಂದು ಸಿದ್ದರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಜಿ ತಿಳಿಸಿದರು.

ಅವರು ಪಟ್ಟಣದ ಪ್ರಸಿದ್ದ ಶ್ರೀ ಗಂಗಾಧರೇಶ್ವರಸ್ವಾಮಿಬೆಟ್ಟದಲ್ಲಿರಣಭೈರೇಗೌಡಯುವಕ ಸಂಘ ಮತ್ತು ಫ್ರೆಂಡ್ಸ್‌ಗ್ರೂಪ್ ಸೇವಾ ಸಮಿತಿ ಸಹಯೋಗದಲ್ಲಿ ನಡೆದ ಲಕ್ಷದೀಪೋತ್ಸವಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿಹಿಂದೂಧರ್ಮದಲ್ಲಿಒಂದೊಂದು ಹಬ್ಬವು ವಿಶಿಷ್ಟತೆಯನ್ನು ಹೊಂದಿದ್ದು ಶಿವರಾತ್ರಿ ಹಬ್ಬದೊಂದು ಈ ಸಂಘಗಳು ಗಂಗಾಧರೇಶ್ವರಸ್ವಾಮಿ ಬೆಟ್ಟದಲ್ಲಿ 25 ವರ್ಷಗಳಿಂದ ಸತತವಾಗಿ ಲಕ್ಷದೀಪೋತ್ಸವಧಾರ್ಮಿಕಆಚರಣೆಯನ್ನು ಆಚರಿಸಿಕೊಂಡು ಬರುತ್ತಿರುವುದು ಸಾಧನೆಯ ವಿಷಯವಾಗಿದೆ, ಗಂಗಾಧರೇಶ್ವರದೇವಾಲಯಐತಿಹಾಸಿಕ ಹಾಗೂ ಪುರಾಣಕಥೆಯನ್ನುಹೊಂದಿದ್ದು ಈ ದೇವಾಲಯ ನಿರ್ಮಾಣ ಮಾಡಿ ಸಾವಿರಾರು ವರ್ಷಗಳಾಗಿದ್ದು ಪ್ರಸ್ತುತಶಿಥಿಲವಾಗುತ್ತಿರುವ ಈ ದೇವಾಲಯವನ್ನು ಮುಂಬರುವ ದಿನಗಳಲ್ಲಿ ಎಲ್ಲಾ ಭಕ್ತರ ಸಹಾಯದಿಂದ ನೂತನದೇವಾಲಯವನ್ನು ನಿರ್ಮಿಸುವ ಕೆಲಸ ಮಾಡಲಾಗುವುದುಎಂದರು.

ಗಂಗಾಧರೇಶ್ವರ ವ್ಯವಸ್ಥಾಪನಾ ಸಮಿತಿಯಅಧ್ಯಕ್ಷ ಕೆ.ವಿ.ಪುರುಷೋತ್ತಮ ಮಾತನಾಡಿಗಂಗಾಧರೇಶ್ವರ ಬೆಟ್ಟದಲ್ಲಿ ಶಿವನ ಉದ್ಭವ ಲಿಂಗವಿದ್ದು ಸಾವಿರಾರು ವರ್ಷಗಳ ಪುರಾಣಇತಿಹಾಸ ಹೊಂದಿದೆ, ಈ ದೇವಾಲಯ ಮುಜರಾಯಿ ಇಲಾಖೆ ಆಡಳಿತಕ್ಕೆ ಒಳಪಟ್ಟಿದ್ದರು ಶಿವರಾತ್ರಿ ಸೇರಿದಂತೆಗಂಗಾಧರೇಶ್ವರನಧಾರ್ಮಿಕಕಾರ್ಯಕ್ರಮಕ್ಕೆ ಸರ್ಕಾರ ಮತ್ತು ಇಲಾಖೆ ಇಂದಯಾವುದೇಆರ್ಥಿಕ ಸಹಾಯ ಬರುವುದಿಲ್ಲ ಇದು ಮುಂದಿನ ದಿನಗಳಲ್ಲಿ ಬದಲಾಗಬೇಕುಎಂದರು.

ರಣಭೈರೇಗೌಡಯುವಕ ಸಂಘದಅಧ್ಯಕ್ಷ ಕೆ.ವಿ.ಮಂಜುನಾಥ್ ಮಾತನಾಡಿಇತ್ತೀಚೆಗೆಯುವಕರಲ್ಲಿಧಾರ್ಮಿಕ ಆಚರಣೆಗಳ ಬಗ್ಗೆ ಆಸಕ್ತಿ ಕುಂದುತ್ತಿದೆ, ನಮ್ಮ ಸಂಘವು 25 ವರ್ಷಗಳ ಕಾಲದಿಂದ ಹಲವಾರು ಏಳು ಬೀಳುಗಳ ಮದ್ಯೆದೀಪೋತ್ಸವಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದುಗಂಗಾಧರೇಶ್ವರ ದೇವಾಲಯದಅಭಿವೃದ್ದಿಗೆ ನಮ್ಮ ಸಂಘವು ದುಡಿಯುತ್ತದೆಎಂದರು.

ಈ ಸಂಧರ್ಭದಲ್ಲಿ ಫ್ರೆಂಡ್ಸ್‌ಗ್ರೂಪ್ ಸೇವಾಸಮಿತಿಅಧ್ಯಕ್ಷರವಿಕುಮಾರ್, ರಣಭೈರೇಗೌಡ ಸಮಿತಿಯಖಜಾಂಚಿ ಕೆ.ಬಿ.ಲೋಕೇಶ್, ಮಲ್ಲಣ್ಣ, ಹೆಚ್.ಎಲ್.ನಾರಾಯಣ್, ಗಂಗಾಧರ, ಪದ್ಮನಾಬ್, ನಟರಾಜ್, ಅನುಪ್ರಸಾದ್, ಅಕ್ಷಯ್, ರಂಗಧಾಮಯ್ಯ, ಸೇರಿದಂತೆಇತರರು ಹಾಜರಿದ್ದರು.


# ಜಗನ್ ಹುಟ್ಟುಹಬ್ಬಕ್ಕೆ ಶುಭಹಾರೈಕೆ

**ಮಾಲೂರು:**ಪುರಸಭೆ ಮಾಜಿ ಅಧ್ಯಕ್ಷ ಬಾಬು ರೆಡ್ಡಿ ಅವರ ಪುತ್ರ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತ ಹಾಗೂ ಯುವ ಮುಖಂಡ ಜಗನ್ ಅವರಿಗೆ ದೇವರು ಹೆಚ್ಚಿನ ಆಯಸ್ಸು ಆರೋಗ್ಯ ಕಾಂಗ್ರೆಸ್ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಳ್ಳಲಿ ಎಂದು ಶಾಸಕ ಕೆ ವೈ ನಂಜೇಗೌಡ ಶುಭ ಹಾರೈಸಿದರು

ಪಟ್ಟಣದ ಮಾರುತಿ ಬಡಾವಣೆಯ ಕಾಂಗ್ರೆಸ್ ಕಚೇರಿಯ ಸಭಾಂಗಣದಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಜಗನ್ ಅವರ ಸ್ನೇಹಿತರ ವತಿಯಿಂದ ಹಮ್ಮಿಕೊಂಡಿದ್ದ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನ್ಮದಿನದ ಶುಭ ಹಾರೈಸಿದರು.

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹಾಗೂ ಪುರಸಭೆಯ ಮಾಜಿ ಅಧ್ಯಕ್ಷ ಬಾಬು ರೆಡ್ಡಿ ಅವರು ಕಾಂಗ್ರೆಸ್ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಅವರ ಪುತ್ರ ಜಗನ್ ಸಹ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯ ಕಾರ್ಯಕರ್ತನಾಗಿದ್ದು ಜಗನ್ ಅವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಆಚರಣೆ ಮಾಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಜಗನ್ ಅವರು ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವ ಮೂಲಕ ಮುಂಬರುವ ಪುರಸಭಾ ಚುನಾವಣೆಗೆ ಪಕ್ಷ ಕಟ್ಟುವ ಕೆಲಸ ಮಾಡುವ ಮೂಲಕ ರಾಜಕೀಯವಾಗಿ ಯಶಸ್ಸು ಕಾಣಲಿ ಎಂದರು. ಕಾಂಗ್ರೆಸ್ ಪಕ್ಷದ ಮುಖಂಡರು, ಸ್ನೇಹಿತರು, ಅಭಿಮಾನಿಗಳು ಪಟಾಕಿ ಸಿಡಿಸಿ, ಬೃಹತ್ ಗಾತ್ರದ ಕೇಕ್ ಕತ್ತರಿಸಿ ಸಿಹಿ ತಿನ್ನಿಸುವ ಮೂಲಕ ಶುಭಾಶಯಗಳು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಷ್ಮಿ ನಾರಾಯಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ ಮಧುಸೂದನ್ ದರಖಾಸ್ತು ಸಮಿತಿ ಅಧ್ಯಕ್ಷ ಎಸ್.ಸಿ ನಾರಾಯಣಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ಬಾಬುರೆಡ್ಡಿ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ನಹೀಮ್, ಕೆಪಿಸಿಸಿ ಸದಸ್ಯ ಸೋಮಣ್ಣ, ಪುರಸಭಾ ಸದಸ್ಯ ಮುರುಳಿಧರ್, ಮಾಜಿ ಸದಸ್ಯ ಹನುಮಂತರೆಡ್ಡಿ ತಾ.ಪಂ ಮಾಜಿ ಸದಸ್ಯ ಮಂಜುನಾಥ್ ರೆಡ್ಡಿ , ದರ್ಕಾಸ್ತು ಸಮಿತಿ ಸದಸ್ಯ ನಾಗಪುರ ನವೀನ್, ತಿರುಮಲ ಹಟ್ಟಿ ಬಾಬು, ಶಬೀರ್, ಡಿ.ಟಿ.ವಸಂತ್, ವಪಚ್ಚಹಳ್ಳಿ ಮುನಿರಾಜು, ಇಂದುಮಂಗಲ ಲೋಕೇಶ್, ಕೂರಂಡಹಳ್ಳಿ ಮಂಜು, ಮಾಸ್ತಿ ಪ್ರವೀಣ್, ಮಣಿಶೆಟ್ಟಹಳ್ಳಿ ನವೀನ್, ಅಶೋಕ್, ಷಣ್ಮುಖ, ಅಕ್ಷಯ್, ಸಂಜುಮೋನಿಷ್, ಲಕ್ಕೂರುರಾಜೇಶ್, ಬೆನ್ನಘಟ್ಟ ನಾಗರಾಜ್,ಪಾಲಾಕ್ಷ ಇನ್ನಿತರರು ಹಾಜರಿದ್ದರು.



# ಆಕಸ್ಮಿಕ ಬೆಂಕಿ: ಅಗ್ನಿಶಾಮಕದಳ ವಾಹನಗಳಿಲ್ಲದೆ ಪರದಾಟ




**ಚಿಕ್ಕಬಳ್ಳಾಪುರ:** ನಗರ ಹೊರವಲಯದ ಸೂಲಾಲಪ್ಪನ ದಿನ್ನೆ ಅರಣ್ಯ ಪ್ರದೇಶಕ್ಕೆ ಆಕಸ್ಮಿಕ ಬೆಂಕಿಬಿದ್ದಿದೆ. ವಿವಿಧ ದಾಳಿಗಳಲ್ಲಿ ಅರಣ್ಯ ಇಲಾಖೆ ವಶಪಡಿಸಿಕೊಂಡಿರುವ ಮರದ ನಾಟಾ ಶೇಖರಿಸಿಟ್ಟಿರುವ ಪ್ರದೇಶದಲ್ಲಿಯ ಬೆಂಕಿ ಕಾಣಿಸಿಕೊಂಡಿದ್ದು, ಮರದ ದಿಮ್ಮಿಗಳು ಸಂಪೂರ್ಣ ಬೆಂಕಿಯ ಜ್ವಾಲೆಗೆ ಆಹುತಿಯಾಗಿದೆ. ಇದನ್ನು ಕಂಡ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಾರ್ವಜನಿಕರು ಅಗ್ನಿಶಾಮಕ ದಳಕ್ಕೆ ಕರೆ ಮಾಡಿದರೆ ಒಂದು ಗಂಟೆಗೂ ಹೆಚ್ಚು ಸಮಯವಾದರೂ ಅಗ್ನಿಶಾಮಕ ದಳದ ಸಿಬ್ಬಂದಿಯ ಸುಳಿವೇ ಇಲ್ಲ. ಚಿಕ್ಕಬಳ್ಳಾಪುರದಲ್ಲಿ ಕೇವಲ ಎರಡು ಅಗ್ನಿ ಶಾಮಕ ವಾಹನಗಳಿದ್ದು, ಇದರಲ್ಲಿ ಒಂದು ವಾಹನ 15 ವರ್ಷ ಪೂರೈಸಿರುವ ಕಾರಣ ಅದನ್ನು ಬಳಸದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸೂಚನೆ ನೀಡಿದ್ದಾರಂತೆ. ಹಾಗಾಗಿ ಉಳಿದಿರುವ ಒಂದು ವಾಹನವನ್ನು ಮಹಾಶಿವರಾತ್ರಿ ಪ್ರಯುಕ್ತ ಈಶಾ ದೇವಾಲಯಕ್ಕೆ ಮುಂಜಾಗ್ರತಾ ಕ್ರಮವಾಗಿ ಕಳುಹಿಸಲಾಗಿದೆ.

ಇದರಿಂದಾಗಿ ಜಿಲ್ಲಾಕೇಂದ್ರದಲ್ಲಿ ಅಗ್ನಿಶಾಮಕ ವಾಹನವೇ ಇಲ್ಲವಾಗಿದ್ದು, ಸೂಲಾಲಪ್ಪನ ದಿನ್ನೆ ಅರಣ್ಯಕ್ಕೆ ಬೆಂಕಿ ಬಿದ್ದಿರುವ ಕಾರಣ ಅಗ್ನಿಶಾಮಕ ದಳದವರು ಕೂಡಲೇ ಶಿಡ್ಲಘಟ್ಟ ಮತ್ತು ದೇವನಹಳ್ಳಿ ಅಗ್ನಿಶಾಮಕ ವಾಹನಗಳಿಗೆ ಕರೆ ಮಾಡಿದ್ದಾರೆ. ಆದರೆ ಅವು ದೂರದಿಂದ ಬರಲು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಹಿಡಿದಿದ್ದು, ಅರಣ್ಯ ಇಲಾಖೆಯಲ್ಲಿ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಬೆಂಕಿಯನ್ನ ನಂದಿಸಲು ಹರಸಾಹಸ ಪಡೆದರು. ನಂತರ ದೇವನಹಳ್ಳಿ ಮತ್ತು ಶಿಡ್ಲಘಟ್ಟದಿಂದ ಬಂದ ಅಗ್ನಿಶಾಮಕ ವಾಹನಗಳು ಅರಣ್ಯಕ್ಕೆ ಬಿದ್ದಿದ್ದ ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಇಂದಿನ ಅವಘಡ ಅರಣ್ಯದಲ್ಲಿ ಆಗಿದ್ದ ಕಾರಣ ಅರಣ್ಯ ನಾಶ ಮತ್ತು ಶೇಖರಿಸಿಟ್ಟಿದ್ದ ನಾಟಾ ಮಾತ್ರ ನಷ್ಟವಾಗಿದೆ. ಅದೇ ಜನವಸತಿ ಪ್ರದೇಶದಲ್ಲಿ ಇಂತಹ ಅವಘಡ ಸಂಭವಿಸಿದ್ದರೆ ಪರಿಸ್ಥಿತಿ ಏನು ಎಂಬ ಪ್ರಶ್ನೆ ಎದುರಾಗಿದೆ.

ಹಾಗಾಗಿ ಜಿಲ್ಲಾಕೇಂದ್ರದಲ್ಲಿ ಹೆಚ್ಚುವರಿಯಾಗಿ ಅಗ್ನಿಶಾಮಕ ವಾಹನಗಳನ್ನು ಇಡುವ ಬಗ್ಗೆ ಸಂಬಂಧಿಸಿದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಗಮನ ಹರಿಸಬೇಕಿದೆ. ಇಲ್ಲವಾದರೆಆಗಬೇಕಾದ ನಷ್ಟ ಆದ ನಂತರ ಎಚ್ಚೆತ್ತರೂ ಉಪಯೋಗವಿಲ್ಲ.

# ತಾಲ್ಲೂಕಿನಾದ್ಯಂತ ಸಂಭ್ರಮದ ಮಹಾಶಿವರಾತ್ರಿ



**ಶಿಡ್ಲಘಟ್ಟ:** ಮಹಾಶಿವರಾತ್ರಿ ಹಬ್ಬವನ್ನು ತಾಲ್ಲೂಕಿನಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಎಲ್ಲಾ ಶಿವಾಲಯಗಳಲ್ಲೂ ಬೆಳಗ್ಗೆಯಿಂದಲೇ ಪೂಜೆ ಪುನಸ್ಕಾರಗಳು ನಡೆದಿದ್ದು, ಭಕ್ತರು ಶಿವನಿಗೆ ಪೂಜೆ ಸಲ್ಲಿಸಿ ಇಷ್ಟಾರ್ಥಗಳು ಈಡೇರಬೇಕೆಂದು ಕೈ ಮುಗಿದು ಪ್ರಾರ್ಥನೆ ಸಲ್ಲಿಸಿದರು.

ನಗರದಲ್ಲಿನ ಪಂಚಲಿಂಗಗಳಾದ ಅಶೋಕ ರಸ್ತೆಯ ಕೋಟೆ ಶ್ರೀ ಪ್ರಸನ್ನ ಸೋಮೇಶ್ವರ, ಪೇಟೆ ಶ್ರೀನಗರೇಶ್ವರ, ಶ್ರೀಕಾಶಿ ವಿಶ್ವನಾಥೇಶ್ವರ, ಅಗ್ರಹಾರ ಬೀದಿಯ ಶ್ರೀಜಲಕಂಠೇಶ್ವರ ಮತ್ತು ಶ್ರೀಏಕಾಂಬರೇಶ್ವರ ದೇವಾಲಯಗಳಲ್ಲಿ ದೇವರ ದರ್ಶನ ಪಡೆದರು.

ನಗರದ ಹೊರವಲಯದ ಬೂದಾಳದ ಶ್ರೀಮಲೆ ಮಲ್ಲೇಶ್ವರಸ್ವಾಮಿ, ವೀರಾಪುರದ ಗವಿ ಶ್ರೀ ಗಂಗಾಧರೇಶ್ವರಸ್ವಾಮಿ ದೇವಾಲಯಗಳಿಗೆ ಭೇಟಿ ನೀಡಿ ಶಿವನ ನಾಮಸ್ಮರಣೆ ಮಾಡಿದರು.

ನಗರದ ಕೋಟೆ ವೃತ್ತದಲ್ಲಿ ಸೀಕಲ್ ರಾಮಚಂದ್ರಗೌಡ ಫೌಂಡೇಷನ್ (ಆರ್‌ಸಿಜೆ ಫೌಂಡೇ ಷನ್)ನಿಂದ ಶ್ರೀಆದಿಯೋಗಿ ಶಿವನ ಪ್ರತಿಮೆಯ ದರ್ಶನ ಹಾಗೂ ಮಕ್ಕಳ ವೇಷಭೂಷಣ ಸ್ಪರ್ಧೆ ಎಲ್ಲಾರ ಗಮನ ಸೆಳೆಯಿತು.

ನಗರದ ಅರಳೇಪೇಟೆಯ ಬಸವೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ದ್ವಾದಶ ಲಿಂಗಗಳ ದರ್ಶನ ಭಕ್ತರ ಗಮನ ಸೆಳೆಯಿತು.

ಮಳ್ಳೂರಿನ ಸಾಯಿಬಾಬಾ ಮಂದಿರದ ಜಲಕಂಠೇಶ್ವರಸ್ವಾಮಿಗೆ ಕುಂಭಾಭಿಷೇಕ, ರುದ್ರ ಹೋಮ, ಪಲ್ಲಕ್ಕಿ ಸೇವೆ ಮತ್ತು ಪುಷ್ಪಾಭಿಷೇಕ ನಡೆಯಿತು.

ನಲ್ಲರಾಳ್ಳ ಬಳಿಯ ಶ್ರೀರಾಮಲಿಂಗನ ಬೋಡು ದೇವಾಲಯ, ಗುಡಿಹಳ್ಳಿಯ ಶ್ರೀಸೋಮೇಶ್ವರಸ್ವಾಮಿ, ಚಿಕ್ಕದಾಸರಹಳ್ಳಿಯ ಶ್ರೀಬ್ಯಾಟರಾಯಸ್ವಾಮಿ ದೇವಾಲಯಗಳಲ್ಲೂ ವಿಶೇಷ ಪೂಜೆಗಳು ನಡೆದವು.

ಚೌಡಸಂದ್ರದ ಶ್ರೀಸೋಮೇಶ್ವರ ದೇವಾಲಯದಲ್ಲಿ ಶಿವರಾತ್ರಿಯಂದು ಬೆಳಿಗ್ಗೆ ಸೂರ್ಯಕಿರಣ ಲಿಂಗ ಸ್ಪರ್ಶ ವಿಶೇಷ ಆಕರ್ಷಣೆಯಾಗಿತ್ತು.

ದೇವಾಲಯಗಳಲ್ಲಿ ದೇವರ ನಾಮಸ್ಮರಣೆಯ ಭಜನೆಗಳು ನಡೆದವು,ರಾತ್ರಿ ಜಾಗರಣೆ ಇರುವ ಭಕ್ತರಿಗೆ ಪ್ರಸಾದ, ಫಲಹಾರ ವಿತರಣೆ ಮಾಡಲಾಯಿತು.

# ಪವಿತ್ರಗಂಗಾ ಜಲ ಸೇವನೆಯಿಂದ ಸಕಲ ಪಾಪಗಳು ನಾಶವಾಗುತ್ತವೆ



**ಶಿಡ್ಲಘಟ್ಟ:** ಗಂಗಾ ಸ್ನಾನ, ತುಂಗಾ ಪಾನ ಎಂದಿನಂತೆ, ಪವಿತ್ರ ಗಂಗೆಯ ಜಲ ಸೇವನೆಯಿಂದ ಸಕಲ ಪಾಪಗಳು ನಾಶವಾಗುತ್ತವೆ ಇದಕ್ಕೆ ಔಷಧೀಯ ಗುಣಗಳೂ ಇವೆ ಈ ಪವಿತ್ರ ಜಲದಿಂದ ಜನರ ಕಷ್ಟಗಳು ನಿವಾರಣೆಯಾಗಲಿ, ಎಲ್ಲಾರಿಗೂ ಆರೋಗ್ಯ ಕಾಪಾಡಲಿ, ಹಾಗೂ ಮಳೆ–ಬೆಳೆ ಚೆನ್ನಾಗಿ ಆಗಲಿ ಎಂಬ ಉದ್ದೇಶದಿಂದ ಗಂಗಾಜಲ ವಿತರಿಸುತ್ತಿದ್ದೇವೆ ಎಂದು ಕರ್ನಾಟಕ ಜಾನಪದ ಪರಿಷತ್ತು ತಾಲ್ಲೂಕು ಅಧ್ಯಕ್ಷ ಎ.ಎಂ. ತ್ಯಾಗರಾಜ್ ತಿಳಿಸಿದರು.

ಕರ್ನಾಟಕ ಜಾನಪದ ಪರಿಷತ್ತು ಮತ್ತು ಅಶ್ವಿನಿ ಗೋವರ್ಧನ ಚಾರಿಟಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಭಕ್ತರಹಳ್ಳಿಯ ಓಂಕಾರೇಶ್ವರ ದೇವಾಲಯದಲ್ಲಿ ಗಂಗಾ ಪೂಜೆ ನೆರವೇರಿಸಿ, ತಾಲ್ಲೂಕಿನ ವಿವಿಧ ಶಿವ ದೇವಾಲಯಗಳಿಗೆ ಗಂಗಾಜಲ ವಿತರಣೆ ಮಾಡಲಾಯಿತು.

ಗಂಗೆಯ ಒಂದು ತೊಟ್ಟು ಸಾಕು ಮುಕ್ತಿ ದೊರಕಲು ಈ ಭಾಗದಲ್ಲಿ ಗಂಗಾಜಲ ಸಿಗುವುದಿಲ್ಲ ಹರಿದ್ವಾರ ಹಾಗೂ ಕಾಶಿಯಿಂದ ಮಾತ್ರ ಲಭ್ಯವಾಗುವ ಈ ಪವಿತ್ರ ಜಲವನ್ನು, ಅಶ್ವಿನಿ ಗೋವರ್ಧನ ಚಾರಿಟಬಲ್ ಟ್ರಸ್ಟ್ ನೆರವಿನಿಂದ ಬೆಂಗಳೂರಿಗೆ ತರಿಸಿಕೊಳ್ಳಲಾಗಿದೆ,

ಕಳೆದ ನಾಲ್ಕು ವರ್ಷಗಳಿಂದ ಈ ಕಾರ್ಯವನ್ನು ಮಾಡುತ್ತಿದ್ದೇವೆ ಗಂಗಾಜಲದಿಂದ ಶಿವನಿಗೆ ಅಭಿಷೇಕ ಮಾಡಿದರೆ, ನಾಡಿಗೆ ಮಳೆ–ಬೆಳೆ ಸಮೃದ್ಧಿಯಾಗಿ ಸುಭಿಕ್ಷತೆ ತಂದುಕೊಡುತ್ತದೆ ಎಂಬ ಜನಮಾನ್ಯತೆಯಿದೆ.

ಈ ಬಾರಿ ಮಹಾಕುಂಭಮೇಳವೂ ನಡೆಯುತ್ತಿರುವುದರಿಂದ, ಶಿವರಾತ್ರಿಯನ್ನು ವಿಶೇಷವಾಗಿ ಆಚರಿಸಿ ಶಿವನ ಕೃಪೆಗೆ ಪಾತ್ರರಾಗೋಣ ಎಂದು ಅವರು ಶುಭವನ್ನು ಕೋರಿದರು.

ಈ ಸಂದರ್ಭದಲ್ಲಿ ರಾಮಣ್ಣ,ಮುನಿಕೃಷ್ಣಪ್ಪ ಲಕ್ಷ್ಮೀನಾರಾಯಣ್,ಶ್ರೀನಿವಾಸ್, ನಾಗೇಶ್, ಕೆಂಪೇಗೌಡ, ಚಂದ್ರಪ್ಪ, ಪಾರ್ವತಮ್ಮ ಹಾಗೂ ಶಿವ ದೇವಾಲಯದ ಅರ್ಚಕರು ಹಾಜರಿದ್ದರು.

# ಸಿಎ ನಿವೇಶನ ಪುರಸಭೆ ವಶಕ್ಕೆ ಪಡೆಯಲು ಸಹಕಾರ ನೀಡಿ: ನಂಜೇಗೌಡ

**ಮಾಲೂರು:** ಪುರಸಭಾ ವ್ಯಾಪ್ತಿಯಲ್ಲಿ ಅಧಿಕಾರಿಗಳು ಗುರುತಿಸಿರುವ 329 ಸಿಎ ನಿವೇಶನಗಳ ಪೈಕಿ ಸಂಘ ಸಂಸ್ಥೆಗಳು ನಿರ್ಮಿಸಿ ಕೊಂಡಿರುವ ಕಟ್ಟಡಗಳನ್ನು ಹೊರತುಪಡಿಸಿ ಉಳಿದ ಸಿಎ ನಿವೇಶನಗಳು ಪುರಸಭೆ ವಶಕ್ಕೆ ಪಡೆಯಲು ಎಲ್ಲಾ ಸದಸ್ಯರು ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ಶಾಸಕ ಕೆ ವೈ ನಂಜೇಗೌಡ ಹೇಳಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷ ಕೋಮಲ ನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪುರಸಭೆಯ ವ್ಯಾಪ್ತಿಯಲ್ಲಿರುವ ಕೆಲವು ಬಡಾವಣೆಗಳಲ್ಲಿ ಪುರಸಭೆಗೆ ಸೇರಿದ ನಿವೇಶನಗಳನ್ನು ಕೆಲವರು ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಖಾತೆ ಮಾಡಿಸಿಕೊಂಡಿದ್ದು ಅಂತಹ ನಿವೇಶನಗಳನ್ನು ಗುರುತಿಸುವಂತೆ ಪುರಸಭಾ ಅಧಿಕಾರಿಗಳಿಗೆ ಸೂಚಿಸಲಾಗಿತ್ತು ಅದರಂತೆ ಪುರಸಭೆಯ ಕಂದಾಯ ಶಾಖೆಯ ಅಧಿಕಾರಿಗಳು ಈಗಾಗಲೇ 329 ಸಿಎ ನಿವೇಶನಗಳನ್ನು ಗುರುತಿಸಿದ್ದಾರೆ ಆ ನಿವೇಶನಗಳಲ್ಲಿ ಸಮುದಾಯಗಳ ಸಂಘಗಳ ಸಿಎ ನಿವೇಶನಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದರೆ ಅವರಿಗೆ ಪುರಸಭೆಯಿಂದ ದಾಖಲೆಗಳನ್ನು ಮಾಡಿಕೊಟ್ಟು ಅಂತಹ ನಿವೇಶನಗಳನ್ನು ಹೊರತುಪಡಿಸಿ ಇನ್ನುಳಿದ ವೈಯಕ್ತಿಕವಾಗಿ ಹೊಂದಿದ್ದರೆ ಅಂತಹ ಸಿಎ ನಿವೇಶನಗಳನ್ನು ಮುಲಾಜಿಲ್ಲದೆ ಪುರಸಭೆಯ ವಶಕ್ಕೆ ಪಡೆಯುವ ಕೆಲಸ ಮಾಡಬೇಕು ಪುರಸಭೆಯ ಅಧಿಕಾರಿಗಳು ಸಿಎ ನಿವೇಶನಗಳನ್ನು ವಶಪಡಿಸಿಕೊಳ್ಳಲು ಬಂದಾಗ ಅವರಿಗೆ ಸದಸ್ಯರು ಆಯಾ ವಾಡುಗಳಲ್ಲಿ ಸಂಪೂರ್ಣ ಸಹಕಾರ ನೀಡುವಂತೆ ಹೇಳಿದರು .

ಅಂತರ್ಜಲ ಕುಸಿಯುತ್ತಿರುವುದರಿಂದ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ತಾಲೂಕಿನಲ್ಲಿ ಉಲ್ಬಣಗೊಳ್ಳುತ್ತಿದೆ ಬೇಸಿಗೆ ಸಮೀಪಿಸುತ್ತಿದ್ದು ಪಟ್ಟಣದಲ್ಲಿ ಕುಡಿಯುವ ನೀರು ಸಮಸ್ಯೆಯಾಗದಂತೆ ಪುರಸಭೆಯ ಅಧಿಕಾರಿಗಳು ಎಚ್ಚರವಹಿಸಿ ನೀರಿನ ಸಮಸ್ಯೆ ಇರುವ ವಾರ್ಡುಗಳಲ್ಲಿ ನೀರು ಸರಬರಾಜು ಮಾಡಲು ಕ್ರಿಯಾ ಪ್ರಯೋಜನ ರೂಪಿಸಿಕೊಳ್ಳಬೇಕು

ಯರಗೋಳು ಯೋಜನೆಯಿಂದ ನಮ್ಮ ತಾಲೂಕಿಗೆ ನಿಗದಿಪಡಿಸಿರುವ ನೀರು ಸರಬರಾಜಿಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ನಮ್ಮ ಪಾಲಿನ ನೀರು ಶೀಘ್ರದಲ್ಲಿಯೇ ನಮಗೆ ಬರಲಿದೆ ಪೈಪ್ ಲೈನ್ ಮೂಲಕ ಈಗಾಗಲೇ 26 ಹಳ್ಳಿಗಳಿಗೆ ಸರಬರಾಜಾಗುತ್ತಿದ್ದು ಉಳಿದ ಗ್ರಾಮಗಳಿಗೂ ಪೈಪ್ ಲೈನ್ ಕಾಮಗಾರಿ ಮಾಡಲು ಆರ್ ಡಿ ಪಿ ಆರ್ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಎತ್ತಿನಹೊಳೆ ಯೋಜನೆಯಿಂದ ಎರಡು ವರ್ಷದೊಳಗೆ ಪಟ್ಟಣದ ದೊಡ್ಡ ಕೆರೆ ಮಾರ್ಕಂಡಯ್ಯ ಡ್ಯಾಮ್ ಸೇರಿದಂತೆ ಆರು ಕೆರೆಗಳಿಗೆ ಹರಿದು ಬರಲಿದೆ ಅಂತರ್ಜಲ ಕುಸಿಯುತ್ತಿದ್ದು ನೀರಿನ ಸಮಸ್ಯೆಯನ್ನು ನೀಗಿಸಲು ಕೆಸಿ ವ್ಯಾಲಿ ನೀರನ್ನು ಹರಿಸಲು ಕ್ರಮ ವಹಿಸಲು ಜಿಲ್ಲಾಧಿಕಾರಿಗಳ ಬಳಿ ಮನವಿ ಮಾಡಲಾಗಿದೆ.

ಸದಸ್ಯ ಎಂ.ವಿ ವೇಮನ ಮಾತನಾಡಿ ಪಟ್ಟಣದ ರಸ್ತೆಗಳಲ್ಲಿ ಗುಂಡಿಗಳು ಬಿದ್ದು ವಾಹನ ಸಂಚಾರ ಹಾಗೂ ಕರಗ ಸಮೀಪಿಸುತ್ತಿರುವುದರಿಂದ ರಸ್ತೆಯಲ್ಲಿ ಓಡಾಡಲು ಕಷ್ಟಕರವಾಗಿದೆ ಗುಂಡಿಗಳನ್ನು ಮುಚ್ಚಲು ಮನವಿ ಮಾಡಿದರು

ಮುಖ್ಯಾಧಿಕಾರಿ ಎ.ಪಿ ಪ್ರದೀಪ್ ಮಾತನಾಡಿ, ರಸ್ತೆಗಳ ಅಭಿವೃದ್ಧಿಗೆ ಈಗಾಗಲೇ 20 ಕೋಟಿ ಬಿಡುಗಡೆಯಾಗಿದೆ ಆರ್ಟ್ ಕಾಪಿ ಬಂದಿದ್ದು ಆನ್ಲೈನ್ ಮೂಲಕ ಸಾಫ್ಟ್ ಕಾಪಿಯನ್ನು ಪಡೆದು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದರು.

ಸದಸ್ಯ ಬಾನುತೇಜ ಮಾತನಾಡಿ ಇಂದಿನ ಅವಧಿಯಲ್ಲಿ ಹಣಕಾಸು ವ್ಯವಹಾರ ಅಕೌಂಟೆಂಟ್ ಮಾಡಿರುವ ದುರುಪಯೋಗ ಯಾವ ಸ್ಥಿತಿಯಲ್ಲಿದೆ




ಎಂದರು

ಇದಕ್ಕೆ ಉತ್ತರಿಸಿ ಮಾತನಾಡಿದ ಮುಖ್ಯ ಅಧಿಕಾರಿ ಈ ಪ್ರಕರಣವು ತನಿಖೆಯ ಹಂತದಲ್ಲಿದ್ದು ಅಪ್ಪಿತಸ್ಥರು ಯಾರೇ ಇದ್ದಲ್ಲಿ ಕಾನೂನು ಕ್ರಮ ವಹಿಸಲಾಗುವುದು ಮಾಹಿತಿಯನ್ನು ಬಹಿರಂಗಪಡಿಸುವಂತಿಲ್ಲ ಎಂದರು

ಶಾಸಕ ಕೆ ವೈ ನಂಜೇಗೌಡ ಮಾತನಾಡಿ ಪುರಸಭಾ ವ್ಯಾಪ್ತಿಯಲ್ಲಿರುವ ಸರ್ವೆ ನಂಬರಗಳ ಆಸ್ತಿಗಳ ಗಡಿ ತಹಶೀಲ್ದಾರ್ ಅವರು ಸರ್ವೇ ಇಲಾಖೆ ಮೂಲಕ ಗುರುತಿಸಿ ಕೊಡಲಿದ್ದಾರೆ

ಪಟ್ಟಣದ ಆಸ್ಪತ್ರೆಯು ಶಿಥಿಲಗೊಂಡಿರುವುದರಿಂದ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಆರೋಗ್ಯ ಸಚಿವರು ಭರವಸೆ ನೀಡಿದ್ದು ಅದರಂತೆ ಬಜೆಟ್ ನಲ್ಲಿ ನೂತನ ಆಸ್ಪತ್ರೆ ನಿರ್ಮಾಣಕ್ಕೆ 40 ಕೋಟಿ ರೂಗಳು ಅನುದಾನವನ್ನು ನಿಗದಿಪಡಿಸಲಿದ್ದಾರೆ ಎಂದರು

ಪಟ್ಟಣದಲ್ಲಿ ಅಂಗಡಿ ಮುಂಗಟುಗಳು ಹೋಟೆಲ್ ಗಳು ಲಾಡ್ಜಳಿಂದ ರೆಡ್ ಲೈಸೆನ್ಸ್ ಪರಿಷ್ಕರಣೆ ಮಾಡಿದರೆ ಪಟ್ಟಣದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಈ ನಿಟ್ಟಿನಲ್ಲಿ ಅಧಿಕಾರಿಗಳು ಏಕೆ ಮುಂದಾಗುತ್ತಿಲ್ಲ ಎಂದರು. ಸದಸ್ಯ ಎನ್.ವಿ.ಮುರಳೀಧರ್ ಮಾತನಾಡಿ ಪಟ್ಟಣದಲ್ಲಿ ಶೇಕಡ 35ರಷ್ಟು ಮಾತ್ರ ಟ್ರೇಡ್ ಲೈಸೆನ್ಸ್ ನೀಡಿದ್ದು ಶೇಕಡ 100ರಷ್ಟು ಟ್ರೇಡ್ ಲೈಸೆನ್ಸ್ ಮಾಡಿಸಿದರೆ ಹೆಚ್ಚಿನ ಹಣವು ಪುರಸಭೆಗೆ ಬರುತ್ತದೆ. ಪುರದಭೆಗೆ ಹೆಚ್ಚಿನ ಅದಾಯ ಬರಲಿದೆ ಈ ನಿಟ್ಟಿನಲ್ಲಿ ಪುರಸಭೆಯ ಅಧಿಕಾರಿಗಳು ಮುಂದಾಗುವಂತೆ ತಿಳಿಸಿದರು.

ಶಾಸಕ ಕೆ ವೈ ನ ನಂಜೇಗೌಡ ಮಾತನಾಡಿ, ಶೇಕಡ 20ರಷ್ಟು ಟ್ರೇಡ್ ಲೈಸೆನ್ಸ್ ಬೆಲೆ ಏರಿಕೆ ಮಾಡಿಕೊಳ್ಳಲು ಸಲಹೆ ನೀಡಿದರು ಅದರಂತೆ ಸಭೆಯು ಅನುಮೋದಿಸಿತು

ಸದಸ್ಯ ಜಾಕೀರ್ ಖಾನ್ ಮಾತನಾಡಿ ಬೆಂಗಳೂರು ಮುಖ್ಯ ರಸ್ತೆಯಲ್ಲಿ ಅಂಗಡಿಗಳ ಮುಂದೆ ಅಂಗಡಿಗಳನ್ನು ಇಟ್ಟುಕೊಂಡಿದ್ದು ವಾಹನಗಳು ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದರು.

ಶಾಸಕರು ಮಾತನಾಡಿ ಪುರಸಭೆ ಅಧಿಕಾರಿಗಳು ತೆರುಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸುವಂತೆ ಸೂಚಿಸಿದರು

ತಾಲೂಕಿನ ದೊಡ್ಡ ಇಗಲೂರು ಬಳಿ ನಿರ್ಮಿಸಿರುವ ಸಂಸ್ಕರಣ ಘಟಕದಲ್ಲಿ ಸಂಗ್ರಹವಾಗುವ ಗೊಬ್ಬರ ಒಂದು ಟನ್ ಗೆ 1,500 ಗಳನ್ನು ನಿಗದಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು

ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿಸಲು ಸರ್ಕಾರಕ್ಕೆ ಪ್ರಸ್ತಾವಿನೆ ಕಳುಹಿಸಲಾಗಿದೆ ಸಚಿವರು ಸಹ ಭರವಸೆ ನೀಡಿದ್ದು ಮುಂಬರುವ ದಿನಗಳಲ್ಲಿ ನಗರ ಸಭೆಯನ್ನಾಗಿಸುವ ಪ್ರಕ್ರಿಯೆಗಳು ಪ್ರಾರಂಭವಾಗಲಿದೆ ಎಂದು ಹೇಳಿದರು

ಸದಸ್ಯ ಎಂ.ರಾಮಮೂರ್ತಿ ಮಾತನಾಡಿ ಹಿಂದುಳಿದ ವರ್ಗದವರಿಗೆ ನೀಡುತ್ತಿರುವ ಶೇಕಡ 7.25 ಅನುದಾನ ಆ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಸಾಕಾಗುತ್ತಿಲ್ಲ ಇದನ್ನು ಏರಿಕೆ ಮಾಡುವಂತೆ ಹೇಳಿದರು

ಮುಖ್ಯಾಧಿಕಾರಿ ಪ್ರದೀಪ್ ಮಾತನಾಡಿ ಮರು ಹರಾಜಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಮೀಸಲಿರಿಸಿರುವ ಅಂಗಡಿಗಳು ಲಾಟರಿ ಮೂಲಕ ಆಯ್ಕೆ ಮಾಡಲು ಸಭೆಯ ಅನುಮತಿ ಕೋರಿದರು

ಅದರಂತೆ ಸಭೆಯಲ್ಲಿ ಎಸ್ಸಿ ಎಸ್ಟಿ ಪಂಗಡದವರಿಗೆ ಮೀಸಲಿಟ್ಟ ಅಂಗಡಿಗಳು ಲಾಟರಿ ಮೂಲಕ ಆಯ್ಕೆ ಮಾಡಲಾಯಿತು

ಯೋಜನಾ ಪ್ರಾಧಿಕಾರದ ಅನುದಾನದಡಿ ಪಟ್ಟಣದ ದೊಡ್ಡ ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಕಾಮಗಾರಿ ಗುಣಮಟ್ಟದಿಂದ ನಡೆಯುತ್ತಿದ್ದು ದೊಡ್ಡ ಕೆರೆಯಲ್ಲಿ ಕೈಗೊಂಡಿರುವ ಕೆರೆ ಅಭಿವೃದ್ಧಿ ಕಾಮಗಾರಿ ಹಾಗೂ 21ಕೋಟಿ ರೂಗಳ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮುಖ್ಯರಸ್ತೆಯಲ್ಲಿ ಮೇಲ್ ಸೇತುವೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲು ಇದ್ದಾರೆ ಪಕ್ಷಾತೀತವಾಗಿ ಎಲ್ಲಾ ಸದಸ್ಯರು ಅಭಿವೃದ್ಧಿಗೆ ಸಹಕಾರ ನೀಡುವಂತೆ ತಿಳಿಸಿದರು ಈ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಎ ರಾಜಪ್ಪ, ಕಂದಾಯ ಅಧಿಕಾರಿ ರೇಣುಕಾ, ಹಿರಿಯ ಆರೋಗ್ಯ ನಿರೀಕ್ಷಕ ಶ್ರೀನಿವಾಸ್, ರಾಜಣ್ಣ, ಪುರಸಭಾ ಸದಸ್ಯರು ಹಾಜರಿದ್ದರು.

## ವಿವಿಧ ಕಾಮಗಾರಿ ವೀಕ್ಷಿಸಿದ ಜಿಲ್ಲಾಧಿಕಾರಿ



**ಶಿಡ್ಲಘಟ್ಟ:** ನಗರಸಭೆ ವ್ಯಾಪ್ತಿಯ ಹಲವು ಕಡೆಗಳಲ್ಲಿ ನಗರೋತ್ಥಾನದ ನಾಲ್ಕನೇ ಹಂತದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ವೀಕ್ಷಿಸಿದರು.

ನಗರೋತ್ಥಾನ ಹಂತ–4ರಲ್ಲಿ ನಗರಕ್ಕೆ 12 ಕೋಟಿ ರೂ.ಗಳು ಬಿಡುಗಡೆಯಾಗಿದ್ದು, ಈ ಪೈಕಿ 3 ಕೋಟಿ ರೂ.ಗಳ ವೆಚ್ಚದ ನಾನಾ ಕಾಮಗಾರಿಗಳು ಪೂರ್ಣಗೊಂಡಿವೆ. ಜಿಲ್ಲಾಧಿಕಾರಿಗಳು ಕಾಮಗಾರಿಗಳು ಪೂರ್ಣಗೊಂಡ ಗುಣಮಟ್ಟವನ್ನು ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಸಾರ್ವಜನಿಕರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು.

ಪರಿಶೀಲನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಡ್ಲಘಟ್ಟ ನಗರದಲ್ಲಿ ನಗರೋತ್ಥಾನ 4ನೇ ಹಂತದಲ್ಲಿ 3 ಕೋಟಿ ರೂ.ಗಳ ವೆಚ್ಚದಲ್ಲಿ ಸಿಮೆಂಟ್ ರಸ್ತೆ, ಒಳಚರಂಡಿ ಸೇರಿದಂತೆ ಇನ್ನಿತರ ಕಾಮಗಾರಿಗಳನ್ನು ಮಾಡಲಾಗಿದ್ದು, ಅದನ್ನು ಪರಿಶೀಲಿಸಲಾಗಿದೆ.

ಎಂ.ಬಿ ಪುಸ್ತಕದಲ್ಲಿರುವ ಅಳತೆ ಪ್ರಕಾರ ರಸ್ತೆ, ಒಳಚರಂಡಿಯ ಉದ್ದ–ಅಗಲ, ಆಳದ ಅಳತೆ ಹಾಗೂ ಗುಣಮಟ್ಟವನ್ನು ನಾವು ಪರಿಶೀಲಿಸಿದ್ದು, ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲಾಗಿದೆ ಎಂದರು.

ಈಗಾಗಲೇ ಮೂರನೇ ವ್ಯಕ್ತಿಗಳಿಂದ ಪರಿಶೀಲನೆ ನಡೆದಿದ್ದು, ನಾನು ಮತ್ತು ನಮ್ಮ ಅಧಿಕಾರಿಗಳ ತಂಡದಿಂದ ಸಾರ್ವಜನಿಕರ ಸಮ್ಮುಖದಲ್ಲಿ ಪರಿಶೀಲಿಸಿದ್ದೇನೆ,ಈ ವೇಳೆ ಸಾರ್ವಜನಿಕರಿಂದ ಯಾವುದೇ ರೀತಿಯ ದೂರುಗಳು ಬರಲಿಲ್ಲ ಎಂದರು.

ಉಳಿದ 9 ಕೋಟಿ ರೂ.ಗಳ ಅನುದಾನದಲ್ಲಿ ಸಾಕಷ್ಟು ಕಾಮಗಾರಿಗಳು ನಡೆಯಬೇಕಿದೆ,ಅವೆಲ್ಲವನ್ನೂ ನಿರ್ದಿಷ್ಟ ಅವಧಿಯೊಳಗೆ ಆರಂಭಿಸಿ, ಶೀಘ್ರವೇ ಪೂರ್ಣಗೊಳಿಸಲಾಗುವುದು ಈ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸ ಲಾಗಿದೆ ಎಂದು ಅವರು ಹೇಳಿದರು. ಈ ಸಂದರ್ಭ ದಲ್ಲಿ ಪ್ರಭಾರ ಯೋಜನಾ ನಿರ್ದೇಶಕಿ ಹಾಗೂ ಕಾರ್ಯ ಪಾಲಕ ಎಂಜಿನಿಯರ್ ಕೆ.ಮಾಧವಿ,ನಗರಸಭೆ ಪೌರಾಯುಕ್ತ ಮಂಜುನಾಥ್, ಎಇಇ ರಘುನಾಥ್, ಸುಧಾಕರ್, ಮೋಹನ್, ಕಿರಣ್, ಗುತ್ತಿಗೆದಾರರಾದ ಕೆ.ಬಿ.ಮಂಜುನಾಥ್, ಮುರಳಿ ಹಾಜರಿದ್ದರು.

## ಪೆಟ್ರೋಲ್ ಸುರಿದು ದ್ವಿಚಕ್ರವಾಹನಗಳಿಗೆ ಬೆಂಕಿಇಟ್ಟ ಕೀಡಿಗೇಡಿಯ ಬಂಧನ

ಕೊರಟಗೆರೆ:–ಮನೆಯ ಮುಂದೆ ನಿಂತಿದ್ದ ದ್ವಿಚಕ್ರ ವಾಹನಗಳಿಗೆ ತಡರಾತ್ರಿ 10ಗಂಟೆಯ ಸಮಯದಲ್ಲಿ ವಾಹನಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿಹಚ್ಚಿ ಪರಾರಿಯಾಗಿದ್ದ ಆರೋಪಿಯನ್ನು ಕೊರಟಗೆರೆ ಪಿಎಸ್ಐ ಚೇತನಗೌಡ ನೇತೃತ್ವದ ತಂಡ ಘಟನೆ ನಡೆದ ಕೇವಲ 8ಗಂಟೆಯೊಳಗೆ ಬಂಧಿಸಿರುವ ಘಟನೆ ನಡೆದಿದೆ.

ಕೊರಟಗೆರೆ ಪಟ್ಟಣದ ಹೊರವಲಯದ ಹನುಮಂತಪುರದ ಡಿಗ್ರಿ ಕಾಲೇಜಿನ ಪಕ್ಕದಲ್ಲಿನ ಸಂತೋಷ್ ಅವರಿಗೆ ಸೇರಿದ್ದ ಸ್ಟೇಷನರಿ ಸ್ಟೋರಿನ ಮುಂಭಾಗ ನಿಂತಿದ್ದ ಎರಡು ದ್ವಿಚಕ್ರ ವಾಹನಗಳು ಬೆಂಕಿಗೆ ಆಹುತಿಯಾಗಿದ್ದವು.



ಪ್ರಥಮದರ್ಜೆ ಕಾಲೇಜು ಸಮೀಪ ರಾಜ್ಯಹೆದ್ದಾರಿಗೆ ಹೊಂದಿಕೊಂಡಿರುವ ಅಂಗಡಿ ಮಳಿಗೆಯ ಮುಂದೆ ನಿಲ್ಲಿಸಿದ ಎರಡು ವಾಹನಗಳಿಗೆ ತಡರಾತ್ರಿ ಬೆಂಕಿಹಚ್ಚಿದ ಪರಿಣಾಮ ಎರಡು ವಾಹನಗಳು ಸುಟ್ಟು ಕರಕಲಾಗಿ ಅಂಗಡಿ ಮುಂಭಾಗದ ಸೀಟ್‌ಗಳು ಸಹ ಸುಟ್ಟುಹೋಗಿದ್ದವು.

8ಗಂಟೆಯೊಳಗೆ ಆರೋಪಿಯ ಎಡೆಮುರಿ ಕಟ್ಟಿದ ಪೊಲೀಸರು:ಸಿಸಿಟಿವಿ ದೃಶ್ಯದ ಮೂಲದ ಆರೋಪಿ ಪತ್ತೆ: ಘಟನೆಗೆ ಸಂಬಂಧಿಸಿದ ಸಿಸಿಟಿವಿ ಮೂಲಕ ಆರೋಪಿ ಪತ್ತೆಯಾಗಿದ್ದು,ಮನೆಯ ಮುಂದೆ ನಿಂತಿದ್ದ ದ್ವಿಚಕ್ರ ವಾಹನಗಳಿಗೆ ಕಾರಿನಲ್ಲಿ ಬಂದು ಪೆಟ್ರೋಲ್ ಸುರಿದು ಬೆಂಕಿಹಚ್ಚಿ ಹೋಗಿರುವ ವಿಡಿಯೋ ಹಿಡಿದು ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಕೊರಟಗೆರೆ ಪಿಎಸ್ಐ ಚೇತನಗೌಡ, ಕ್ರೈಂ ಸಿಬ್ಬಂಧಿಗಳಾದ ದೊಡ್ಡಲಿಂಗಯ್ಯ ಮತ್ತು ಮೋಹನ್ ನೇತೃತ್ವದಲ್ಲಿ ಘಟನೆ ನಡೆದ ಕೇವಲ 8ಗಂಟೆಯೊಳಗೆ ಆರೋಪಿ ಕಾರ್ತಿಕ್ ನನ್ನು ಬಂಧಿಸಿ ಆತನಿಂದ ಸ್ವಿಫ್ಟ್ ಕಾರನ್ನು ವಶಕ್ಕೆ ಪಡೆದಿದ್ದಾರೆ.

ಧಗದಗನೇ ಓತ್ತಿ ಉರಿದ ದ್ವಿಚಕ್ರವಾಹನಗಳು: ಮುಖ್ಯರಸ್ತೆ ಪಕ್ಕದಲ್ಲಿಯೇ ದ್ವಿಚಕ್ರ ವಾಹನಗಳು ಉರಿಯುತ್ತಿರುವುದನ್ನು ನೋಡಿದ ವಾಹನ ಸವಾರರು ಅಂಗಡಿಯ ಮಾಲೀಕರಿಗೆ ವಿಷಯಮುಟ್ಟಿಸಿದ್ದಾರೆ. ಮನೆಯ ಮೇಲಿಂದ ಕೆಳಗೆ ಬರುವಷ್ಟರಲ್ಲಿ ಎರಡು ವಾಹನಗಳು ಸುಟ್ಟುಹೋಗಿವೆ.

ಸ್ಥಳಕ್ಕೆ ಅಗ್ನಿಶಾಮಕ ವಾಹನ ಆಗಮಿಸಿ ಅಂಗಡಿ ಮತ್ತು ಮಹಡಿ ಮೇಲಿನ ಮನೆಗೆ ಆವರಿಸಿದ್ದ ಬೆಂಕಿಯನ್ನು ನಂದಿಸಿದ್ದಾರೆ. ಕೊರಟಗೆರೆ ಪಿಎಸ್ಐ ಚೇತನಗೌಡ ನೇತೃತ್ವದ ತಂಡ ಬೇಟಿನೀಡಿ ಪರೀಶಿಲನೆ ನಡೆಸಿದ್ದಾರೆ.

## ಮಕ್ಕಳ ದಾಖಲಾತಿ ಹೆಚ್ಚಿಸಲು ಸಮಾನ ಮನಸ್ಕರ ಸಭೆ

**ಕೆ.ಆರ್.ಪೇಟೆ:** ತಾಲ್ಲೂಕಿನ ತೆಂಡೇಕೆರೆ ಗ್ರಾಮದಲ್ಲಿ ಇರುವ ಸರ್ಕಾರಿ ಪದವಿಪೂರ್ವ ಕಾಲೇಜನ್ನು ಉಳಿಸಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಮಾನ ಮನಸ್ಕರ ಸಭೆ ನಡೆಯಿತು.

ಗ್ರಾಮದ ಬಾಳೆಹೊನ್ನೂರು ಶಾಖಾ ಮಠದ ಶ್ರೀಗಳಾದ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದ.

ತಾಲ್ಲೂಕಿನ ಪ್ರಮುಖ ವಾಣಿಜ್ಯ ಕೇಂದ್ರ, ಶತಮಾನದ ಸಂತೆಗೆ ಹೆಸರಾದ ತೆಂಡೇಕೆರೆ ಗ್ರಾಮ ಹತ್ತಾರು ಗ್ರಾಮಗಳ ಕೇಂದ್ರವಾಗಿದೆ. ತೆಂಡೇಕೆರೆ ಮತ್ತು ಚಟ್ಟಂಗೆರೆಯಲ್ಲಿ ಪ್ರೌಢಶಾಲೆಗಳಿದ್ದು ಈ ಮಕ್ಕಳು ಎಸ್.ಎಸ್.ಎಲ್.ಸಿ ಪರಿಕ್ಷೆ ಮುಗಿದ ನಂತರ ಶಿಕ್ಷಣ ಪಡೆಯಲು ಸಾಧ್ಯಾಗಲೆಂದು, ಕಾಲಿಡಲಾಗದ ಅಸಾಧ್ಯ ಜನಸಂದಣಿ ಇರುವ ಬಸ್‌ನಲ್ಲಿ ಹೆಣ್ಣು ಮಕ್ಕಳು ಸೇರಿದಂತೆ ವಿದ್ಯಾರ್ಥಿಗಳು ಪ್ರಯಾಣ ಮಾಡುವದನ್ನು ತಪ್ಪಿಸಲು ಬಡವರು, ಮದ್ಯಮವರ್ಗದವರು ಮತ್ತು ರೈತಾಪಿ ಮಕ್ಕಳ ಪಿಯು ಶಿಕ್ಷಣಕ್ಕಾಗಿ



ಸರ್ಕಾರ ಪಿಯು ಕಾಲೇಜು ಆರಂಭಿಸಿತ್ತು. ಆದರೆ ಇದರ ಸದುಪಯೋಗ ಪಡೆದುಕೊಳ್ಳದಿರುವದು ವಿಷಾದವಾಗಿದೆ. ಈ ಭಾಗದ ಬಹುತೇಕ ಮಕ್ಕಳು ಒಂದೇ ಕ್ಯಾಂಪಸ್‌ನಲ್ಲಿ ಅಂಗನವಾಡಿಯಿಂದ ಪಿಯುವರೆವಿಗೆ ಶಿಕ್ಷಣವಿದ್ದರೂ ದೂರದ ಊರಿಗೆ ಹೋಗುತ್ತಿರುವದರಿಂದ ತಿರುಗಾಟದಲ್ಲೇ ಸಮಯ ಕಳೆದು ಕಲಿಕೆಯ ಮೇಲೆ ಪರಿಣಾಮ ಬೀರಿ ಶಿಕ್ಷಣವನ್ನು ಪೂರ್ಣಗೊಳಿಸದೆ ವಾಪಸ್ಸಾಗುತಿದ್ದಾರೆ. ಇದನ್ನು ತಪ್ಪಿಸಲು ಪೋಷಕರು ತಮ್ಮ ಮಕ್ಕಳನ್ನು ತೆಂಡೇಕೆರೆ ಗ್ರಾಮದಲ್ಲಿ ಇರುವ ಶಿಕ್ಷಣ ಸಮಸ್ಥೆಗಳಿಗೆ ಮಕ್ಕಳನ್ನು ದಾಖಲಿಸಬೇಕು.

ಕಾಲೇಜು ಆರಂಭವಾಗಿ ಹಲವು ವರ್ಷಗಳಾದರೂ ಸ್ವಂತ ಕಟ್ಟಡ, ತನ್ನದೇ ಆದ ಮೂಲಭೂತ ಸೌಕರ್ಯ ಹೊಂದಿಲ್ಲ. ಕ್ಷೇತ್ರದ ಶಾಸಕರಾದ ಎಚ್.ಟಿ.ಮಂಜು ಅವರು ಗಮನಹರಿಸಿ ಎಲ್ಲಾ ಸೌಲಭ್ಯ ಕಲ್ಪಿಸಿ ಮಾದರಿ ಶಿಕ್ಷಣ ಸಂಸ್ಥೆ ರೂಪಿಸಭೆಕು. ಇಲ್ಲಿಯೇ ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸಿ ಸುತ್ತಮುತ್ತಲ ಗ್ರಾಮಗಳ ಮಕ್ಕಳು ಕಲಿಯಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು. ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಮತ್ತು ಪೋಷಕರು ಶ್ರಮಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮಾತನಾಡಿದ ಮುಖಂಡ ಅ.ನಿ ದೇವರಾಜು ಈ ಬಾರಿ ಕಾಲೇಜಿಗೆ ಹೆಚ್ಚು ಮಕ್ಕಳು ದಾಖಲಾಗಲೇಬೇಕು. ಮಕ್ಕಳಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗನ್ನು ಒದಗಿಸಿಕೊಡಲು ಸಮಾನ ಮನಸ್ಕರ ಕೂಟ ಸಿದ್ದವಿದೆ. ಈ ನಿಟ್ಟಿನಲ್ಲಿ ಪೋಷಕರು, ಹಿರಿಯ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಸಹಕರಿಸುವಂತೆ ಮನವಿ ಮಾಡಿದರು

ಸಭೆಯಲ್ಲಿ ಮುಖಂಡರಾದ ಮಲ್ಕೋನಹಳ್ಳಿ ಜವರಯ್ಯ, ಯಡೂರಪ್ಪ, ವಿರೇಶ್, ಅಂಚನಹಳ್ಳಿ ಈರಯ್ಯ, ಮಂಚನಹಳ್ಳಿ ನರಸಿಂಹೇಗೌಡ, ತೆಂಡೇಕೆರೆ ಬಾಲುರಾಜ್, ಮಲ್ಕೋನಹಳ್ಳಿ ಬೀಮರಾಜು, ಚಟ್ಟಂಗೆರೆ ಮಹೇಶ್, ರಮೇಶ್, ಸತೀಶ್, ರವಿ, ಸ್ವಾಮೀಗೌಡ, ಪ್ರಾಂಶುಪಾಲ ಮಂಜುನಾಥ್, ಮುಖ್ಯ ಶಿಕ್ಷಕ ಮುತ್ತುರಾಜು,, ಉಪನ್ಯಾಸಕರಾದ ಪ್ರಿಯದರ್ಶಿನಿ, ಮಹೇಶ್, ಶಿವಕುಮಾರ್, ಸತೀಶ್, ಮಹಾದೇವಪ್ಪ, ಮಂಜು ಮಲ್ಲೇಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

## ಶಿವರಾತ್ರಿ ಅಂಗವಾಗಿ ಅದ್ದೂರಿ ಗಂಗಾಧರೇಶ್ವರ ಬ್ರಹ್ಮರಥೋತ್ಸವ

ಕೊರಟಗೆರೆ: ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಫೆ26 ರಂದು ಪಟ್ಟಣದ ಪ್ರಸಿದ್ದ ಗಂಗಾಧರೇಶ್ವರ ಸ್ವಾಮಿ ಬೆಟ್ಟದಲ್ಲಿ ಗಂಗಾಧರೇಶ್ವರಸ್ವಾಮಿಗೆ ರಾತ್ರಿ ಗಿರಿಜಾ ಕಲ್ಯಾಣ ಮತ್ತು ಲಕ್ಷದೀಪೋತ್ಸವದೊಂದಿಗೆ ಫೆ.27 ರಂದು ವಿಶೇಷ ಪೂಜೆಯೊಂಗಿದೆ ಬ್ರಹ್ಮರಥೋತ್ಸವವು ಅದ್ದೂರಿಯಾಗಿ ನಡೆಯಿತು.

ತಹಶೀಲ್ದಾರ್ ಮಂಜುನಾಥ್ ಪಟ್ಟಣದ ತೇರಿನ ಬೀದಿಯಲ್ಲಿ ನಡೆದ ಪಾರ್ವತಿ ಸಮೇತ ಗಂಗಾಧರೇಶ್ವರಸ್ವಾಮಿ ಬ್ರಹ್ಮರಥೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡಿ ದಕ್ಷಿಣಕಾಶಿಯೆಂದೇ ಪ್ರಸಿದ್ದಿ ಪಡೆದಿರುವ ಪಟ್ಟಣದ ಜನತೆಯ ಆರಾಧ್ಯ ದೈವ ಶ್ರೀ ಗಂಗಾಧರೇಶ್ವರ ದೇವಾಲಲಯವು ಸಾವಿರಾರು ವರ್ಷಗಳ ಇತಿಹಾಸವಿದ್ದು, ಈ ದೇವಾಲಲಯವು ಮುಜುರಾಯಿ ಇಲಾಖೆಗೆ ಸೇರಿದ್ದು ರಣಭೈರೇಗೌಡರ ಯುವ ವೇದಿಕೆ ಮತ್ತು ಫ್ರೇಂಡ್ಸ್ ಗ್ರೂಪ್ ವತಿಯಿಂದ ಕಳೆದ 25 ವರ್ಷಗಳಿಂದ ಮಹಾಶಿವರಾತ್ರಿ ಹಬ್ಬದಂದು ಗಂಗಾಧರೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಗಳು, ಅಭಿಷೇಕ, ಗಿರಿಜಾ ಕಲ್ಯಾಣ ಮತ್ತು ಲಕ್ಷದೀಪೋತ್ಸವ ಕಾರ್ಯಕ್ರಮಗಳು ನಡೆಸಿಕೊಂಡು ಬರುತ್ತಿದ್ದು ಈ ವರ್ಷವು ಕಳೆದ ರಾತ್ರಿ ಫೆ26 ರಂದು ಬೆಟ್ಟದ ದೇವಾಲಯದಲ್ಲಿ ಅದ್ದೂರಿಯಾಗಿ ಧಾರ್ಮಿಕ



ಕಾರ್ಯಕ್ರಮಗಳನ್ನು ನಡೆಸಿದ್ದು ಫೆ. 27 ರಂದು ತೇರಿನ ಬೀದಿಯಲ್ಲಿ ಗಂಗಾಧರೇಶ್ವಸ್ವಾಮಿಯ ಬ್ರಹ್ಮರಥೋತ್ಸವವು ನಡೆದಿದ್ದು ನಾಡಿನಲ್ಲಿ ಉತ್ತಮ ಮಳೆಯನ್ನು ಕರುಣಿಸಿ ಸಕಲ ಜೀವರಾಶಿಗಳನ್ನು ಕಾಪಾಡಿ ಭಕ್ತರ ಬೇಡಿಕೆಗಳನ್ನು ಈಡೇರಿಸುವಂತೆ ಪ್ರಾರ್ಥಿಸಲಾಗಿದೆ ಎಂದರು.

ಭಕ್ತರು ಮಹಾಶಿವರಾತ್ರಿಯಂದು ಉಪವಾಸ ವ್ರತ ಆಚರಣೆಯಲ್ಲಿ ರಾತ್ರಿ ಗಂಗಾಧರೇಶ್ವರಸ್ವಾಮಿಗೆ ನಡೆದ ಗಿರಿಜಾ ಕಲ್ಯಾಣೋತ್ಸವ ಹಾಗೂ ಲಕ್ಷದೀಪೋತ್ಸವ ಕಾರ್ಯಕ್ರಮದಲ್ಲಿ ಶ್ರದ್ದಾಭಕ್ತಿಯಿಂದ ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿ ರಾತ್ರಿ ಜಾಗರಣೆ ಮಾಡಿ ಫೆ.27 ರಂದು ನಡೆದ ಗಂಗಾಧರೇಶ್ವರಸ್ವಾಮಿ ಬ್ರಹ್ಮರತಥೋತ್ಸವದಲ್ಲಿ ಭಾಗವಹಿಸಿ ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥನೆ ಮಾಡಿ ರಥೋತ್ಸವದ ನಂತರ ಪ್ರಸಾದ ಸ್ವೀಕರಿಸಿದ ತಮ್ಮ ಉಪವಾಸ ವ್ರತ ಕೊನೆಗೊಳಿಸುವರು. ಈ ಸಂದರ್ಭದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಅನಿಲ್, ಕಂದಾಯ ಇಲಾಖೆಯ ಆರ್.ಐ ಬಸವರಾಜು, ವಿ.ಎ.ಪವನ್‌ಕುಮಾರ್, ಪ.ಪಂ.ಮುಖ್ಯಾಧಿಕಾರಿ ಉಮೇಶ್, ಪ.ಪಂ.ಅಧ್ಯಕ್ಷ ಅನಿತಾ, ಸ್ಥಾಯಿಸಮಿತಿ ಅಧ್ಯಕ್ಷ ಹೇಮ, ಸದಸ್ಯರಾದ ಕೆ.ಎನ್.ಲಕ್ಷ್ಮಿನಾರಾಯಣ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ವಿ.ಪುರುಷೋತ್ತಮ್, ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕ ಕೆ.ಎಲ್.ಆನಂದ್, ಜಿ.ಪಂ. ಮಾಜಿ ಸದಸ್ಯ ಸುಕುಮಾರ್, ಪ.ಪಂ.ಮಾಜಿ ಸದಸ್ಯ ಪವನ್‌ಕುಮಾರ್, ರಣಭೈರೇಗೌಡ ಯುವ ವೇದಿಕೆಯ ಅಧ್ಯಕ್ಷ ಕೆ.ವಿ.ಮಂಜುನಾಥ್, ಕೆ.ಬಿ.ಲೋಕೇಶ್, ಫ್ರೆಂಡ್ಸ್ ಗ್ರೂಪ್ ಅಧ್ಯಕ್ಷ ರವಿ ಕುಮಾರ್, ಮಲ್ಲಣ್ಣ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

## ಬಿಎಸ್‌ವೈ ಹುಟ್ಟುಹಬ್ಬದ ಅಂಗವಾಗಿ ಹಣ್ಣುಹಂಪಲು ವಿತರಣೆ

**ಮಾಲೂರು:** ರಾಜ್ಯ ರಾಜಕಾರಣದಲ್ಲಿ ರಾಜಾಹುಲಿ ಅಂತಾನೇ ಕರೆಸಿಕೊಳ್ಳುವ ಬಿ.ಎಸ್ ಯಡಿಯೂರಪ್ಪ 82ನೇ ವಸಂತಕ್ಕೆ ಕಾಲಿಟ್ಟಿರುವ ಅವರ ಹುಟ್ಟು ಹಬ್ಬವನ್ನು ಹಣ್ಣು ಹಂಪಲು ವಿತರಿಸುವ ಮೂಲಕ ಆಚರಿಸಲಾಗುತ್ತಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪುರನಾರಾಯಣಸ್ವಾಮಿ ಹೇಳಿದರು.

ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಒಳ ಹಾಗೂ ಹೋರ ರೋಗಿಗಳಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಹುಟ್ಟು ಹಬ್ಬದ ಅಂಗವಾಗಿ ಹಣ್ಣು ಹಂಪಲು ವಿತರಿಸಿ ಮಾತನಾಡಿದರು.

ದಲಿತರು, ರೈತರು, ಬಡವರ ಪರ ಹೋರಾಟ ನಡೆಸಿದ ಹೆಮ್ಮೆಯ ನಾಯಕ ಬಿಎಸ್ ವೈ. ಅಸಾಧಾರಣ ನಾಯಕನಾಗಿ, ರಾಜ್ಯದ ಜನರ, ರೈತ ಬಂಧುಗಳ, ದುರ್ಬಲರ ಆಶೋತ್ತರಗಳಿಗಾಗಿ ದುಡಿದ ನಾಯಕ. ರಾಜ್ಯ ಕಂಡ ಧೀಮಂತ ನಾಯಕ, ಹುಟ್ಟು ಹೋರಾಟಗಾರ. ನಾಲ್ಕು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ್ದಾರೆ. ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಜನಪರ, ಸಮಾಜಮೂಖಿ ಕಾರ್ಯಗಳಾದ ಸೈಕಲ್, ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷಾ ಯಂತಹ ಯೋಜನೆಗಳನ್ನು ಜಾರಿಗೊಳಿಸಿ ಉತ್ತಮ ಆಡಳಿತ ನೀಡಿದ್ದಾರೆ ಎಂದರು.



ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಪದ್ಮಾವತಿ, ಜಿಲ್ಲಾ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಎಂ ವಿ ಚಲಪತಿ ಒಬಿಸಿಜಿಲ್ಲಾ ಕಾರ್ಯದರ್ಶಿ ಎನ್.ವಿ. ಅಶೋಕ್‌ನಗರಾಧ್ಯಕ್ಷ ರಾಮಮೂರ್ತಿ, ಪ್ರಕಾರ್ಯದರ್ಶಿ ವಿಜಯ್ ಕುಮಾರ್, ತಾಲ್ಲೂಕು ಸಂಚಾಲಕ ಸುಧಾಕರ್, ಮುಖಂಡರಾದ ವೇಣುಗೋಪಾಲ್, ಎಂ.ಎನ್. ನಾಗರಾಜ್, ನರೇಂದ್ರ , ಪ್ರತಿಮಾ ಉಮಾದೇವಿ , ಮಂಜುನಾಥ್, ಮಣಿ ಇನ್ನಿತರರು ಹಾಜರಿದ್ದರು.

# ಇಂದು ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವರ ಬ್ರಹ್ಮರಥೋತ್ಸವ

**ಮುಳಬಾಗಿಲು:** ತಾಲೂಕಿನ ಪುರಾಣ ಪ್ರಸಿದ್ಧವಾದ ಶ್ರೀರಾಮಲಿಂಗೇಶ್ವರ ಸ್ವಾಮಿ ದೇವರ ಬ್ರಹ್ಮರಥೋತ್ಸವ ಫೆಬ್ರವರಿ 28ರಂದು ನಡೆಯಲಿದ್ದು ಲಕ್ಷಾಂತರ ಭಕ್ತಾದಿಗಳು ಆಗಮಿಸಲಿದ್ದು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ

ಭಕ್ತಾದಿಗಳಿಗೆ ಕುಡಿಯುವ ನೀರು ಶೌಚಾಲಯ ಸೌಲಭ್ಯವನ್ನು ಕಲ್ಪಿಸಲಾಗಿದ್ದು ಜಾನುವಾರುಗಳಿಗೆ ನೀರಿನ ಸಮಸ್ಯೆ ಆಗಬಾರದೆಂದು ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದೆ

ವಲಯ ಅರಣ್ಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಐದು ಟ್ಯಾಂಕರ್ ಗಳಿಂದ ನೀರು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ದಿನದ 24 ಗಂಟೆ ಚಿಕಿತ್ಸೆ ನೀಡಲು ವೈದ್ಯರನ್ನು ನಿಯೋಜನೆ ಮಾಡಲಾಗಿದೆ

ಜಾತ್ರೆ ಹಾಗೂ ರಥೋತ್ಸವದಲ್ಲಿ ಯಾವುದೇ ರೀತಿಯ ತೊಂದರೆಗಳು ಆಗದಂತೆ ಇರಲು ಎಸ್ಪಿ. ಎ ಎಸ್ ಪಿ. ಡಿವೈಎಸ್ಪಿ. ನೇತೃತ್ವದಲ್ಲಿ ವಿಶೇಷ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ .700ಕ್ಕೂ ಹೆಚ್ಚು ಪೊಲೀಸರನ್ನು ಯೋಜನೆ ಮಾಡಲಾಗಿದೆ

ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ವಿವಿಧ ತಾಲೂಕುಗಳಿಂದ ಬರುವ ಭಕ್ತಾದಿಗಳಿಗೆ ರಾಜ್ಯ ಸಾರಿಗೆ ಸಂಸ್ಥೆ




75 ಬಸ್ಸುಗಳನ್ನು ವ್ಯವಸ್ಥೆ ಮಾಡಲಾಗಿದ್ದು ಬೆಂಗಳೂರಿನಿಂದ ಬರುವ ಭಕ್ತಾದಿಗಳಿಗೆ 22 ಬಸ್ಸುಗಳನ್ನು ವ್ಯವಸ್ಥೆ ಮಾಡಲಾಗಿದೆ ಶಾಸಕ ಸಮೃದ್ಧಿ ಮಂಜುನಾಥ್ ಎಸ್ ಪಿ. ನಿಖಿಲ್. ಎಸಿ ಡಾ. ಮೈತ್ರಿ. ತಹಸಿಲ್ದಾರ್ ವಿ ಗೀತಾ. ಪಾಪಂ ಇ ಓ ಡಾಕ್ಟರ್ ಕೆ ಸರ್ವೇಶ್ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲನೆ ಮಾಡಿದ್ದಾರೆ

ಅವಣಿಯು ಪುರಾಣಪ್ರಸಿದ್ದ ಪುಣ್ಯಕ್ಷೇತ್ರ ವಾಗಿದ್ದು, ಇಲ್ಲಿನ ಪರಿಸರ, ಅನೇಕ ದೇವಾಲಯಗಳು ಮತ್ತು ಶಿಲಾ ಶಾಸನಗಳು ಶೀಕ್ಷೇತ್ರದ ಪ್ರಾಚೀನ ಪ್ರಾಮುಖ್ಯತೆಯನ್ನು ಸಾರುತ್ತವೆ. ಗ್ರಾಮದಲ್ಲಿ ಸಾಕ್ಷಾತ್ ಶ್ರೀರಾಮಚಂದ್ರನಿಂದಲೇ ಶ್ರೀರಾಮಲಿಂಗೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದು, ಭವ್ಯ ಶಿವಲಿಂಗಕ್ಕೆ ನಿತ್ಯ ಪೂಜೆ ಜತೆಗೆ ಶಿವರಾತ್ರಿಯಂದು ವಿಶೇಷ ಪೂಜಾದಿಗಳು ನೆರವೇರುತ್ತವೆ.

ಸುತ್ತಮುತ್ತಲ ಪ್ರದೇಶ ಪುರಾಣಪ್ರಸಿದ್ಧವಾದ ಅವಂತಿಕಾ ಕ್ಷೇತ್ರದ ಬೆಟ್ಟದ ಮೇಲೆ ಶ್ರೀಸೀತಾಪಾರ್ವತಿ ದೇವಾಲಯ ಇದ್ದು, ಬೆಟ್ಟದ ಮಧ್ಯೆ ವಾಲ್ಮೀಕಿ ಋಷಿಯ ಆಶ್ರಮವಿದೆ. ಬೆಟ್ಟದ ತಪ್ಪಲಿನಲ್ಲಿ ಶ್ರೀ ಆದಿ ಜಾಂಭವಂತ ದೇವಾಲಯ ಇದ್ದು, ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಮೊದಲು ಪ್ರಥಮ ಪೂಜೆ ಈ ಎರಡು ಸ್ಥಳಗಳಲ್ಲಿ ಆರಂಭಗೊಳ್ಳುವುದು ವಾಡಿಕೆ.

ಸೀತಾಮಾತೆಯು ಪಾರ್ವತಿದೇವಿಯನ್ನು ಪೂಜಿಸಿದ ಸ್ಥಳದಲ್ಲೇ ಪಾರ್ವತಿದೇವಿಯ ದೇವಾಲಯ ಇದ್ದು, ರಾಮಲಕ್ಷಣರು



## ಶಾಸಕ ಸಮೃದ್ಧಿ ಮಂಜುನಾಥ್ ರವರ ಅನಿಸಿಕೆ

ಆವಣಿ ಕ್ಷೇತ್ರ ತನ್ನದೇ ಆದ ಖ್ಯಾತಿಯನ್ನು ಹೊಂದಿದ್ದು ನೆರೆ ರಾಜ್ಯಗಳಲ್ಲಿ ಲಕ್ಷಾಂತರ ಜನ ಭಕ್ತರಿದ್ದಾರೆ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಬ್ರಹ್ಮ ರಥೋತ್ಸವ ಅತ್ಯಂತ ಅದ್ದೂರಿಯಾಗಿ ನಡೆಸ ಲಾಗುತ್ತಿದ್ದು

ಭಕ್ತರಿಗೆ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ದೇವಾಲಯದಲ್ಲಿ ಶುದ್ಧ ಕುಡಿಯುವ ನೀರು. ಹಾಸನ. ಮ್ಯಾಟ್ ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವಿಶೇಷ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಭಕ್ತಾದಿಗಳು ಮುಕ್ತದಿಂದ ಆಗಮಿಸಿ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದಾಗಿದೆ ದೇವಾಲಯದ ಅಭಿವೃದ್ಧಿಗೆ ಹೆಚ್ಚಿನ ಅನುದಾನಕ್ಕೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

## ಲವ-ಕುಶರಿಗೆ ಜನ್ಮ ನೀಡಿದ ಸ್ಥಳ

ಸೀತಾದೇವಿ ವನವಾಸವಿದ್ದಾಗ ಇದೇ ಸ್ಥಳದಲ್ಲಿ ತಂಗಿದ್ದು, ಮಕ್ಕಳಾದ ಲವ–ಕುಶರಿಗೆ ಜನ್ಮವಿತ್ತಳೆಂದೂ ಲವಕುಶರು ರಾಮಾಶ್ವಮೇಧ ಕುದುರೆಯನ್ನು ಕಟ್ಟಿದ ಹಾಗೂ ರಾಮಲಕ್ಷ್ಮಣರೊಡನೆ ಇಲ್ಲಿಯೇ ಯುದ್ಧಮಾಡಿದ ಮತ್ತು ತಾವು ಪ್ರಯೋಗ ಮಾಡಿದ ಬಾಣಗಳ ಪ್ರತೀಕಗಳು ಬೆಟ್ಟದ ಮೇಲೆ ಅನೇಕ ಸ್ಥಳಗಳಲ್ಲಿ ಇಂದಿಗೂ ಕಾಣಬಹುದಾಗಿದೆ.

ಬಿಟ್ಟ ಬಾಣಗಳು ದೊಡ್ಡದಾಗಿರುವ ಬಂಡೆಯನ್ನು ಕೊರೆದು ಪವಿತ್ರ ಪುಣ್ಯತೀರ್ಥವಾಗಿದೆ. ಈ ಸುತ್ತಲು ಅನೇಕ ತಾಣಗಳು ವಾಲ್ಮೀಕಿಯ ಕುಟೀರ, ಲವಕುಶರ ತೊಟ್ಟಿಲು, ಸೀತೆಯ ಅಡುಗೆಪಾತ್ರೆ, ಬಟ್ಟೆಯೊಗೆಯುತ್ತಿದ್ದ ಕೊಳ, ಲವಕುಶರು ಯಜ್ಞಾಶ್ವವನ್ನು ಕಟ್ಟಿದ ಬಂಡೆ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆ, ಶ್ರೀರಾಮ ಲಂಕೆಯನ್ನು ಗೆದ್ದು ಅಯೋಧ್ಯೆಗೆ ಹಿಂತಿರುಗುವ ಹಾದಿಯಲ್ಲಿ ಇಲ್ಲಿಗೆ ಬಂದಿದ್ದು, ಯುದ್ಧ ಪಯಾಂಥವಾಗಿ ಶ್ರೀರಾಮಲಿಂಗೇಶ್ವರ, ಶ್ರೀಲಕ್ಷ್ಮಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ, ಅಂಜನೇಶ್ವರ, ಸುಗ್ರೀವೇಶ್ವರ, ಅಂಗದೇಶ್ವರ, ದೇವಾಲಯಗಳಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವುದು ಕ್ಷೇತ್ರದ ಮಹಿಮೆಯನ್ನು ಒತ್ತು ಹೇಳುತ್ತದೆ.

# ಉಪನಿರ್ದೇಶಕರಾಗಿ ಉಮೇಶ್ ಅಧಿಕಾರ ಸ್ವೀಕಾರ

**ಶಿಡ್ಲಘಟ್ಟ:** ನಗರದ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ ಉಪನಿರ್ದೇಶಕರಾಗಿ ಎನ್. ಉಮೇಶ್ ಅಧಿಕಾರ ವಹಿಸಿಕೊಂಡರು.

ಎನ್.ಉಮೇಶ್ ಅವರು ಈ ಹಿಂದೆ ಮೈಸೂರು ಜಿಲ್ಲೆ ಹುಣಸೂರಿನ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸಹಾಯಕ ನಿರ್ದೇಶಕರಾಗಿದ್ದರು.

ಶಿಡ್ಲಘಟ್ಟ ರೇಷ್ಮೆಗೂಡು ಮಾರುಕಟ್ಟೆ ಉಪನಿರ್ದೇಶಕರಾಗಿದ್ದ ಎನ್. ಮಹದೇವಯ್ಯ ಅವರು ಬೆಂಗಳೂರು ಓಕಳೀಪುರಂ ರೇಷ್ಮೆ ವಿನಿಮಯ ಕೇಂದ್ರದ ಜಂಟಿ ನಿರ್ದೇಶಕರಾಗಿ ಮುಂಬಡ್ತಿ ಹೊಂದಿ ವರ್ಗಾವಣೆ ಆಗಿದ್ದಾರೆ.

ಇದರಿಂದ ತೆರವಾದ ಸ್ಥಾನದಲ್ಲಿ ಎನ್. ಉಮೇಶ್ ಅಧಿಕಾರ ವಹಿಸಿಕೊಂಡರು.

ಉಪನಿರ್ದೇಶಕರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಎನ್.ಉಮೇಶ್, ದೇಶದಲ್ಲೇ ಅತಿ ಹೆಚ್ಚು ರೇಷ್ಮೆಗೂಡು ವಹಿವಾಟು ನಡೆಯುವ ಮಾರುಕಟ್ಟೆ ಇದಾಗಿದೆ, ರೇಷ್ಮೆ ಬೆಳೆಗಾರರು ಹಾಗೂ ರೀಲರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ



ಕೆಲಸ ಮೊದಲು ಆಗಬೇಕಿದೆ,ಮಾರುಕಟ್ಟೆಗೆ ಮೂಲಸೌಕರ್ಯ ಕಲ್ಪಿಸುವ ಜತೆಗೆ ಹೆಚ್ಚಿನ ಪ್ರಮಾಣದ ರೇಷ್ಮೆಗೂಡು ಆವಕ ಆಗುವಂತೆ ನಾವೆಲ್ಲರೂ ಸೇರಿ ಮಾಡಬೇಕಿದೆ ಎಂದರು. ಇದಕ್ಕೆ ಎಲ್ಲ ರೈತರು,ರೀಲರುಗಳು ಹಾಗೂ ಇಲ್ಲಿನ ಅಧಿಕಾರಿ, ಸಿಬ್ಬಂದಿಯ ಸಹಕಾರ ಬಹಳ ಮುಖ್ಯ ಸದ್ಯದಲ್ಲೇ ಎಲ್ಲರ ಸಭೆ ಕರೆದು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಕೆ.ತಿಮ್ಮರಾಜು ಹಾಜರಿದ್ದರು.

# ರೈತರ ಅಭಿವೃದ್ಧಿ ಬಯಸುವ ಏಕೈಕ ಜೀವ ಬಿಎಸ್‌ವೈ

**ದೇವನಹಳ್ಳಿ:** ರಾಜ್ಯದ ಹೆಣ್ಣುಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಪೋಷಕರಿಗೆ ಸಹಕಾರ ಕೊಟ್ಟು ಅವರ ಸರ್ವತೋಮುಖ ಅಭಿವೃದ್ಧಿಯ ಉದ್ದೇಶದೊಂದಿಗೆ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯನ್ನು ರೂಪಿಸಿದ್ದರು, ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಸೈಕಲ್ ನೀಡಿದ್ದರು ಹಾಗೂ ರೈತರಿಗೂ ಸಹ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ನಾಲ್ಕು ಸಾವಿರ ರೂಗಳನ್ನು ಕೊಟ್ಟು ಅವರ ಏಳಿಗೆಗೆ ಬೆನ್ನೆಲುಬಾಗಿ ಇದ್ದರು ಹಾಗಾಗಿ ರೈತರ ಅಭಿವೃದ್ಧಿಯನ್ನು ಬಯಸುವ ಏಕೈಕ ಜೀವ ಬಿ.ಎಸ್. ಯಡಿಯೂರಪ್ಪ ಎಂದು ಮಾಜಿ ಶಾಸಕ ಪಿಳ್ಳ ಮುನಿಶಾಮಪ್ಪ ಹೇಳಿದರು.

ದೇವನಹಳ್ಳಿ ತಾಲೂಕಿನ ಕೊಯಿರ – ಹೊಸೂರು ಗ್ರಾಮದಲ್ಲಿರುವ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎಂ.ರವಿಕುಮಾರ್ ರವರ ರವೀಣಾ ನಿಲಯದಲ್ಲಿ ನಡೆದ ರಾಜ್ಯ ಕಂಡ ಧೀಮಂತ ನಾಯಕ,ರೈತ ನಾಯಕ,ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರವರ ಹುಟ್ಟುಹಬ್ಬದ ಪ್ರಯುಕ್ತ ಭಾಗ್ಯಲಕ್ಷ್ಮಿ ಯೋಜನೆ,8 ನೇ ತರಗತಿ ಮಕ್ಕಳಿಗೆ ಉಚಿತ ಸೈಕಲ್ ನೀಡುವ ಯೋಜನೆ,ರಾಜ್ಯ ಬಿಜೆಪಿ ಸರ್ಕಾರದ ಯಡಿಯೂರಪ್ಪ ರವರು ರೈತರಿಗೆ 4000 ರೂಗಳು ನೀಡಿರುವ ಯೋಜನೆ,ಇನ್ನಿತರ ಯೋಜನೆಗಳ ಫಲಾನುಭವಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯದ ಪ್ರತಿಯೊಂದು ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಗೆ ಪೂರಕವಾಗುವಂತೆ ಬಿಜೆಪಿ ಸರ್ಕಾರ ಆಡಳಿತಾವಧಿಯಲ್ಲಿ ರಾಜ್ಯದ ಜನತೆಗೆ ಯಡಿಯೂರಪ್ಪ ಅವರು ಹಲವಾರು ಮಹತ್ವದ ಯೋಜನೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ, ಅವರ ನಾಯಕತ್ವದ ವೈಖರಿ ಇಂದಿನ ಯುವ ನಾಯಕರಿಗೆ ಸದಾ ಪ್ರೇರಣೆಯಾಗಿರುತ್ತದೆ ಎಂದು ಹೇಳಿದರು.

ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ಮಾಜಿ ಜಿಲ್ಲಾಧ್ಯಕ್ಷ ಅಂಬರೀಶ್ ಗೌಡ ಮಾತನಾಡಿ ಜನಗಳಿಗೋಸ್ಕರ ಇರುವಂತಹ ಮಹಾನ್ ನಾಯಕರಾದ ಯಡಿಯೂರಪ್ಪ ಅವರ ಜನ್ಮದಿನಾಚರಣೆಯನ್ನು ಇಂದಿನ ಯುವಜನಾಂಗ ಅರ್ಥಪೂರ್ಣವಾಗಿ ಆಚರಿಸಬೇಕು ಹಾಗೂ ಅವರ ತತ್ವಸಿದ್ಧಾಂತಗಳು ,ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ಭಾಗಿಯಾಗಬೇಕು ಎಂದರು.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಯಾಗಿದ್ದಾಗ ನೀಡಿದಂತಹ ಯೋಜನೆಗಳಾದ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಾದ ಹೆಣ್ಣು ಮಕ್ಕಳಿಗೆ ರೇಷ್ಮೆ ಸೀರೆಯನ್ನು ಕೊಡುಗೆಯಾಗಿ ನೀಡಿ,ಅವರೊಂದಿಗೆ ಉಳಿದ ಯೋಜನೆಗಳ ಫಲಾನುಭವಿಗಳಾದ ರೈತರನ್ನು ಮತ್ತು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್ .ಎಂ ರವಿಕುಮಾರ್, ಮುಖಂಡರಾದ ಆರ್.ಕೆ.ನಂಜೇಗೌಡ, ದೇ.ಸು ನಾಗರಾಜ್, ಕೇಶವ,ಪುನೀತ,ಪ್ರೇಮ ,ಸಾವಕನಹಳ್ಳಿ ಯುವ ಮುಖಂಡ ಮಧು ,ಬಾಬು,ರವಿ ಸೇರಿದಂತೆ ತಾಲೂಕಿನ ಹಲವು ಮುಖಂಡರು ಮತ್ತು ಗ್ರಾಮಸ್ಥರು ಭಾಗಿಯಾಗಿದ್ದರು.




# ಮುಖಂಡರು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ; ಹೆಚ್.ಟಿ.ಮಂಜು

**ಕೆ.ಆರ್.ಪೇಟೆ.:** ನಮ್ಮ ಮುಂದೆ ಸಾಲು ಸಾಲು ಚುನಾವಣೆಗಳಿವೆ. ಅವುಗಳಲ್ಲಿ ವಿಜಯ ಸಾಧಿಸಿದರೆ ಮುಂದಿನ ಐದು ವರ್ಷಗಳ ಕಾಲ ಕಾರ್ಯಕರ್ತರ ಕೆಲಸಕಾರ್ಯಗಳು ಸರಳವಾಗಲಿದ್ದು ಈ ನಿಟ್ಟಿನಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಅವರು ಮುಂಬರುವ ಕೃಷಿ ಪತ್ತಿನ ಸಹಕಾರ ಸಂಘಗಳ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಅಕ್ಕಿಹೆಬ್ಬಾಳು, ಮಾಂಬಳ್ಳಿ, ಬೀರುವಳ್ಳಿ ಹಾಗು ಮಂದಗೆರೆ ವ್ಯಾಪ್ತಿಯ ಜೆಡಿಎಸ್ ಮುಖಂಡರು ಹಾಗು ಕಾರ್ಯಕರ್ತರ ಪೂರ್ವಭಾವಿ ನಡೆಸಿ ಸಲಹೆ ಸೂಚನೆಗಳನ್ನು ನೀಡಿ ಮಾತನಾಡಿದರು.

ತಾಲೂಕಿನಲ್ಲಿ ಜೆಡಿಎಸ್ ಕಾರ್ಯಕರ್ತರು ಸೈನಿಕರಂತೆ ಪಕ್ಷದ ಪರವಾಗಿ ಕೆಲಸ ಮಾಡುತ್ತಾರೆ ಪಕ್ಷದ ಮುಖಂಡರು ಕಾರ್ಯಕರ್ತ ರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಮೂಲಕ ಚುನಾವಣೆಗಳನ್ನುನಡೆಸಿ ಪಕ್ಷದ ಕಾರ್ಯಕರ್ತರಿಗೆ ಅಧಿಕಾರ ಸಿಗುವಂತೆ ಶ್ರಮಿಸಬೇಕು ಈ ಚುನಾವಣೆಯಲ್ಲಿ ಅವಕಾಶ ಸಿಗದಿದ್ದರೆ ಆಕಾಂಕ್ಷಿಗಳು ಧೃತಿಗೆ ಡುವುದು ಬೇಡ ಇನ್ನೂ ಹಲವು ಚುನಾವಣೆಗಳಿವೆ ಯಾವುದಾದರೂ ಒಂದು ಚುನಾವಣೆಯಲ್ಲಿ ಅವಕಾಶ ಸಿಗಲಿದೆ ಎಂದು ಚುನಾವಣಾ ಸ್ಪರ್ಧಾ ಆಕಾಂಕ್ಷಿಗಳಿಗೆ ಆತ್ಮವಿಶ್ವಾಸ ತುಂಬಿದರು. ಪಕ್ಷದ ಮುಖಂಡರು ಒಗ್ಗಟ್ಟಿನಿಂದ ಚುನಾವಣೆ ನಡೆಸಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಬೇಕು



ಎಂದ ಶಾಸಕ ಮಂಜು ನಿಮ್ಮ ಬೆಂಬಲಕ್ಕೆ ನಾನು ಸದಾ ಸಿದ್ದನಿದ್ದು ಚುನಾವಣೆಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದು ಕಾರ್ಯಕರ್ತರಿಗೆ ಧೈರ್ಯ ತುಂಬಿದರು. ಜೆಡಿಎಸ್ ಮುಖಂಡರಾದ ಎ.ಆರ್.ರಘು, ದಿಶಾ ಸಮಿತಿ ಸದಸ್ಯ ನರಸನಾಯಕ, ವಕೀಲ ನವೀನ್‌ಕುಮಾರ್, ಕಟ್ಟೆಕ್ಯಾತನಹಳ್ಳಿಚಂದ್ರೇಗೌಡ, ಗ್ರಾಮ ಪಂಚಾಯತಿ ಸದಸ್ಯ ಬೆಳತೂರುಪುಟ್ಟೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಬೀರುವಳ್ಳಿ ಕುಮಾರ, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಬೀರುವಳ್ಳಿಕೃಷ್ಣ, ಬೆಳತೂರುದಿನೇಶ, ಮಾಂಬಳ್ಳಿಕಾಂತರಾಜು, ದಯಾ, ದೀಪು, ಪ್ರಸನ್ನ, ಮಹೇಶ್, ರಂಗೇಗೌಡ, ಕಂಬಣ್ಣ, ಮಂಜಣ್ಣ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

# ಸುಮಂಗಳಿಭವ ಕಾರ್ಯಕ್ರಮ ಯಶಸ್ವಿಗೆ ಜಿ.ಮಂಜುನಾಥ್ ಕರೆ

**ಮುಳಬಾಗಿಲು:**ಮಹಿಳೆಯರಿಗೆ ಗೌರವ ನೀಡುವ ಸಲುವಾಗಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಸುಮಂಗಳಿಭವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಪ್ರತಿಯೊಬ್ಬರು ಸಂಪೂರ್ಣ ಸಹಕಾರ ನೀಡಬೇಕೆಂದು ಕೋಲಾರ ಶಾಸಕ ಕೊತ್ತೂರು ಜಿ ಮಂಜುನಾಥ್ ತಿಳಿಸಿದರು

ಅವರು ನಗರದ ಹೊರವಲಯದಲ್ಲಿರುವ ಕಾಂಗ್ರೆಸ್ ಭವನದ ಆವರಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು ಮಾರ್ಚ್ 9ನೇ ತಾರೀಖು ಗಟ್ಟು ಗುಡಿ 16 ರಂದು ತಾಯಲೂರು 23ರಂದು ಆವಣಿ 28ರಂದು ಕೊಲದೇವಿ ಏಪ್ರಿಲ್ 14 ರಂದು ಕಸಬಾ ಹಾಗೂ ನಗರ ವ್ಯಾಪ್ತಿಯ ಕಪಲಮಡುಗು ಎಂ ಜಿ ಸಿಕ್ಸ್ ಮಾರ್ಕೆಟ್ ನಲ್ಲಿ ಏರ್ಪಡಿಸ ಲಾಗುತ್ತಿದೆ .ಸ್ಥಳೀಯ ಮುಖಂಡರು ಕಾರ್ಯಕ್ರಮ ಸಂಪೂರ್ಣವಾಗಿ ಯಶಸ್ವಿಯಾಗಲು ಶ್ರಮಿಸಬೇಕೆಂದು ತಿಳಿಸಿದರು ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಮನೆ ಮನೆ ಗೂ ಭೇಟಿ ನೀಡಿ ಜಾಗೃತಿ ಮೂಡಿಸಬೇಕು ಜೊತೆಗೆ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂದು ತಿಳಿಸಿದರು ತಾಪಂ. ಜಿ ಪಂ ನಗರ ಸಭೆಯ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲು ಈಗಿಂದಲೇ ಪೂರ್ವ ತಯಾರಿ ಮಾಡಿಕೊಳ್ಳಬೇಕೆಂದು ತಿಳಿಸಿದರು ಇನ್ನು ಎರಡು ತಿಂಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಏರ್ಪಡಿಸಿ ಸಿಎಂ ಡಿಸಿಎಂ ಸೇರಿದಂತೆ ಇತರೆ ಇಲಾಖೆಗಳ ಸಚಿವರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು ಈ ಕಾರ್ಯಕ್ರಮಗಳಿಗೆ ನಾನು ಮತ್ತು ಎಂಎಲ್ಸಿ ಅನಿಲ್ ಕುಮಾರ್ ರವರು



ಹಾಜರಾಗುತ್ತೇವೆ ಎಂದು ತಿಳಿಸಿದರು

ಆದಿನಾರಾಯಣ ಮಾತನಾಡಿ ಕೋಲಾರ ಶಾಸಕ ಕೊತ್ತೂರು ಜಿ ಮಂಜುನಾಥ್ ರವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಈ ಕಾರ್ಯಕ್ರಮ ಸಂಪೂರ್ಣವಾಗಿ ಯಶಸ್ವಿಗೊಳಿಸಲು ಕ್ರಮವಹಿಸಬೇಕೆಂದು ತಿಳಿಸಿದರು ಪಕ್ಷದ ಸಂಘಟನೆಗೆ ಹೆಚ್ಚು ಹೊತ್ತು ನೀಡುತ್ತಿದ್ದು ಮುಂದಿನ ದಿನಗಳಲ್ಲಿ ಗ್ರಾಮಮಟ್ಟದಿಂದ ಪಕ್ಷದ ಸಂಘಟನೆ ಮಾಡಲಾಗುವುದು ಎಂದು ತಿಳಿಸಿದರು ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿ ಆಡಳಿತ ಚುಕ್ಕಾಣಿ ಹಿಡಿಯಲು ಸಾಧನೆಗಳ ಬಗ್ಗೆ ಜನ ಜಾಗೃತಿ ಮೂಡಿಸಬೇಕಾಗಿದೆ ಎಂದರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಕರ್ತರ ಸಭೆಯನ್ನು ನಡೆಸಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿದರು ಪಕ್ಷಾತೀತವಾಗಿ ಜಾತ್ಯತೀತವಾಗಿ ಎಲ್ಲಾ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ ಎಂದು ತಿಳಿಸಿದರು

ಆವಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂಸಿ ನೀಲಕಂಠೇಗೌಡ ಮಾತನಾಡಿ ಈ ಕಾರ್ಯಕ್ರಮ ಅತ್ಯಂತ ವಿಶೇಷವಾಗಿ ಮಹಿಳೆಯರಿಗೆ ಗೌರವ ನೀಡುವ ಕಾರ್ಯಕ್ರಮವಾಗಿದೆ ಇದನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಈಗಾಗಲೇ ಹಲವಾರು ಬಾರಿ ಸಭೆಗಳನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು ಈ ಕಾರ್ಯಕ್ರಮ ಅತ್ಯಂತ ಅದ್ದೂರಿಯಾಗಿ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು ಮುಖಂಡರಾದ ಜಿ ರಾಮಲಿಂಗಾರೆಡ್ಡಿ. ಆಲಂಗೂರ್ ಶಿವಣ್ಣ .ಆರ್ ಆರ್ ರಾಜೇಂದ್ರ ಗೌಡ. ದರ್ಕಾಸು ಸಮಿತಿ ಸದಸ್ಯರಾದ ಜಮ್ಮನಹಳ್ಳಿ ಕೃಷ್ಣ .ಗುಜ್ಜನಹಳ್ಳಿ ಮಂಜುನಾಥ್. ಮುಖಂಡರಾದ ಉಮಾಶಂಕರ್ ಗುಮ್ಮಿಕಲ್ ರಾಮರೆಡ್ಡಿ ಗೊಲ್ಲಹಳ್ಳಿ ವೆಂಕಟೇಶ್ ಸತೀಶ್ ರಾಮಾಂಜಿ ರಂಗಸ್ವಾಮಿ ಮೆಕಾನಿಕ್ ಶ್ರೀನಿವಾಸ್ ವೆಂಕಟೇಶ ಗೌಡ .ಕಾರ್ಗಿಲ್ ವೆಂಕಟೇಶ್ ಚಲಪತಿ .ಮಂಡಿಕಲ್ ಮಂಜುನಾಥ್ .ಗುಮ್ಮಿಕಲ್ ಶ್ರೀನಿವಾಸ್ ಹಾಜರಿದ್ದರು.

# ಜಾಗರಣೆ ಮಾಡಿದರೆ ಇಷ್ಟಾರ್ಥಗಳು ಈಡೇರಲಿವೆ

**ಶಿಡ್ಲಘಟ್ಟ:** ಮಹಾಶಿವರಾತ್ರಿ ಹಬ್ಬದಂದು ಶಿವನಾಮವನ್ನು ಸ್ಮರಿಸಿ ಜಾಗರಣೆ ಮಾಡಿದರೆ ಇಷ್ಟಾರ್ಥಗಳು ಈಡೇರಲಿವೆ ಎಂಬ ಪ್ರತೀತಿ ಇದೆ ಪ್ರತಿಯೊಬ್ಬರು ಶಿವನಾಮ ಸ್ಮರಣೆ ಮಾಡಿ ಭಗವಂತನ ಕೃಪೆಗೆ ಪಾತ್ರರಾಗಿ ಎಂದು ಬಿಜೆಪಿ ಮುಖಂಡರು ಹಾಗೂ ಆರ್.ಸಿ.ಜಿ. ಫೌಂಡೇಷನ್‌ನ ಅಧ್ಯಕ್ಷ ಸೀಕಲ್ ರಾಮಚಂದ್ರಗೌಡ ತಿಳಿಸಿದರು.

ನಗರದ ಕೋಟೆ ಸರ್ಕಲ್ ನಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಹಮ್ಮಿಕೊಂಡಿದ್ದ ಅದಿಯೋಗಿ ಶಿವನ ದರ್ಶನ ಮತ್ತು ಮಕ್ಕಳ ಸಾಂಸ್ಕೃತಿಕ ವೇಷಭೂಷಣ ಕಾರ್ಯಕ್ರಮ ಹಾಗೂ ಕುಂಭಮೇಳದ ತ್ರಿವೇಣಿ ಸಂಗಮದ ಪವಿತ್ರ ಗಂಗಾಜಲ ಪ್ರೋಕ್ಷಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿವರಾತ್ರಿ ಹಬ್ಬ ಆಚರಣೆಯಿಂದ ಎಲ್ಲಾರ ಬಾಳಲ್ಲಿ ಬದುಕು ಬದಲಾಗಿ ಎಲ್ಲರಲ್ಲೂ ಸಾಮರಸ್ಯ ಭಾವನೆ ಮೂಡಲಿ ಎಂದ ಅವರು ಕುಂಭ ಮೇಳದಲ್ಲಿ ಭಾಗವಹಿಸಬೇಕೆಂಬ ಮಹದಾಸೆ ಅನೇಕರಿಗೆ ಇರಲಿದೆ ಆದರೆ ಆ ಆಸೆ ಈಡೇರುವುದು ಕೆಲವರ ಬದುಕಿನಲ್ಲಿ ಮಾತ್ರ ,ಈ ಕ್ಷೇತ್ರದ ಅನೇಕರು ಕುಂಭ ಮೇಳಕ್ಕೆ ಹೋಗಿ ಬರಲಾಗಿಲ್ಲ ಹಾಗಾಗಿ ನಾನು ಕುಂಭ ಮೇಳದಿಂದ ಪವಿತ್ರ




ಗಂಗಾಜಲವನ್ನು ತಂದಿದ್ದೇನೆ ,ಗಂಗಾಜಲ ಪ್ರೋಕ್ಷಣೆಯಿಂದ ಬದುಕು ಪಾವನ ಆಗಲಿ, ಕಷ್ಟಗಳು ಮಂಜಿನಂತೆ ಕರಗಿ ಕಾಲ ಕಾಲಕ್ಕೆ ಮಳೆ ಬೆಳೆಯಾಗಿ ಎಲ್ಲಾ ಕಡೆ ಹಸಿರು ನೆಲೆಸಿ ಸುಖ ಸಮೃದ್ಧಿಯ ಬದುಕು ನಮ್ಮೆಲ್ಲರದಾಗಲಿ ಎಂದು ಭಗವಂತನಲ್ಲಿ ಕೋರಿದರು.

ಇದೇ ವೇಳೆ ಆದಿಯೋಗಿ ಶಿವನಮೂರ್ತಿಗೆ ಪೂಜೆ ಸಲ್ಲಿಸಿ ಶಿವನ ನಾಮ ಸ್ಮರಣೆ ಮಾಡಲಾಯಿತು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವೇಷಭೂಷಣ ಕಾರ್ಯಕ್ರಮ ನಡೆಯಿತು.

ಉತ್ತಮವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಉತ್ತಮ ವೇಷಭೂಷಣ ಪ್ರದರ್ಶಿಸಿದವರಿಗೆ ಬಹುಮಾನ ಹಾಗೂ ಆದಿಯೋಗಿ ಶಿವನ ಕಾಣಿಕೆ ನೀಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷರಾದ ಸೀಕಲ್ ಆನಂದ್ ಗೌಡ ,ನಗರಸಭೆ ಸದಸ್ಯರಾದ ನಾರಾಯಣಸ್ವಾಮಿ, ಬಿಜೆಪಿ ನಗರ ಘಟಕ ಅಧ್ಯಕ್ಷರಾದ ನರೇಶ್ ,ಪುರುಷೋತ್ತಮ್ ಮುಂತಾದವರು ಪಾಲ್ಗೊಂಡಿದ್ದರು.

# ಇಟಗಿ ಗ್ರಾ.ಪಂಗೆ ನೂತನ ಅಧ್ಯಕ್ಷರ ಆಯ್ಕೆ

**ಕುಕನೂರು:** ತಾಲೂಕಿನ ಇಟಗಿ ಗ್ರಾ.ಪಂ.ಗೆ ನೂತನ ಅಧ್ಯಕ್ಷರಾಗಿ ರತ್ನಮ್ಮ ಹಂಚ್ಯಾಳಪ್ಪ ಬಜೇಂತ್ರಿ ಅವರು ಅವಿರೋಧವಾಗಿ ಆಯ್ಕೆಯಾದರು. ಹಾಲಿ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ತಹಸೀಲ್ದಾರ್ ಪ್ರಾಣೇಶ್ ಎಚ್ ಅವರ ಮೇಲುಸ್ತುವಾರಿಯಲ್ಲಿ ನೂತನ ಅಧ್ಯಕ್ಷರ ಆಯ್ಕೆ ನಡೆಯಿತು.

ಅದರಂತೆ ಉಳಿದ ಆಡಳಿತ ಅವದಿಗೆ ನೂತನ ಅಧ್ಯಕ್ಷರಾಗಿ ರತ್ನಮ್ಮ ಹಂಚ್ಯಾಳಪ್ಪ ಬಜೇಂತ್ರಿ



ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶರಣಪ್ಪ ಕೆಳಗಿನಮನಿ, ಉಪಾಧ್ಯಕ್ಷೆ ಸುವರ್ಣ ಹೊನ್ನಪ್ಪ ಕುರಿ, ಮುಖಂಡರಾದ ಶಿವಕುಮಾರ್ ಗುಳಗಣ್ಣನವರ್ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರಾದ ಪ್ರಭುರಾಜ್ ಹಳ್ಳಿ, ಗವಿಸಿದ್ದಪ್ಪ ಮುದ್ದಾಬಳ್ಳಿ, ಲಕ್ಷಣ್ ಮ್ಯಾಗೇರಿ. ದೇವಪ್ಪ ಹರಿಜನ, ರವಿ ಲಮಾಣಿ, ಕಲಾವತಿ ಕಳ್ಳಿ, ಬಸವರಾಜೇಶ್ವರಿ ಕಾಂತಿ, ರೇಣುಕಾ ಉಪ್ಪಾರ್, ಮಹೇಶ್ ದೊಡ್ಡಮನಿ, ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದು ನೂತನ ಅಧ್ಯಕ್ಷರಿಗೆ ಶುಭ ಹಾರೈಸಿದರು.

# ವಿಚ್ಛೇದನ ಘೋಷಿಸಿದ ಸಂಯುಕ್ತ

ಇತ್ತೀಚೆಗೆ ಸೆಲೆಬ್ರೆಟಿಗಳ ಬಾಳಲ್ಲಿ ವಿಚ್ಛೇದನ ಸಾಮಾನ್ಯವಾಗುತ್ತಿದೆ. ಮದುವೆ ಸಂಬಂಧಗಳು ಸುದೀರ್ಘ ವರ್ಷ ಉಳಿಯುತ್ತಿಲ್ಲ ಅನ್ನೋ ಮಾತಗಳು ಕೇಳಿಬರುತ್ತಿರುವ ಬೆನ್ನಲ್ಲೇ ಬಿಗ್ ಬಾಸ್ ಸ್ಪರ್ಧಿ ಶಾಕ್ ನೀಡಿದ್ದಾರೆ. ಬಿಗ್ ಬಾಸ್ ಸ್ಪರ್ಧಿ ಸಂಯುಕ್ತ ಷಣ್ಮುಗನ್ ಇದೀಗ ಅಧಿಕೃತವಾಗಿ ವಿಚ್ಛೇದನ ಘೋಷಿಸಿದ್ದಾರೆ. ಸುದೀರ್ಘ ದಿನಗಳಿಂದ ದಾಂಪತ್ಯ ಜೀವನದಲ್ಲಿ ನಡೆದ ಕೆಲ ಘಟನೆಗಳು ಈ ನಿರ್ಧಾರಕ್ಕೆ ಕಾರಣ ಎನ್ನಲಾಗುತ್ತಿದೆ.

ತಮಿಳು ಬಿಗ್ ಬಾಸ್ ಮೂಲಕ ಸಂಯುಕ್ತಾ ಷಣ್ಮುಗನಾಥನ್ ಭಾರಿ ಜನಪ್ರಿಯತೆ ಪಡೆದಿದ್ದಾರೆ. ಸಂಯುಕ್ತಾ ಷಣ್ಮುಗನಾಥನ್ ಕಾಲೇಜು ದಿನಗಳಲ್ಲಿ ಮಾಡೆಲಿಂಗ್ ಕ್ಷೇತ್ರದಲ್ಲಿ ಗಮನ ಹರಿಸಿದ್ದರು. ಧಾರವಾಹಿ, ಸಿನಿಮಾಗಳಲ್ಲಿ ಪಾತ್ರ ಮಾಡುತ್ತಾ ಜನಪ್ರೀಯತೆ ಗಳಿಸಿಕೊಂಡ ಸಂಯುಕ್ತ, ಪೋಷಕರ ಇಚ್ಛೆಯಂತೆ ಕಾರ್ತಿಕ್ ಶಂಕರ್ ಎಂಬ ಉದ್ಯಮಿ ಜೊತೆ ವಿವಾಹವಾದರು. ಇವರಿಗೆ ರಾಯನ್ ಎಂಬ ಮಗನಿದ್ದಾನೆ.

ಈ ನಡುವೆ ತನ್ನ ಗಂಡನಿಂದ ವಿಚ್ಛೇದನ ಪಡೆಯುವುದಾಗಿ ಘೋಷಿಸಿದ್ದಾರೆ. ಈ ಬಗ್ಗೆ ತನ್ನ ಇನ್ಸ್ಟಾಗ್ರಾಮ್ ಪುಟದಲ್ಲಿ, ಕಳೆದ ಜೀವನದಿಂದ ತಾನು ಮುಂದೆ ಸಾಗುತ್ತಿರುವುದಾಗಿ ತಿಳಿಸಿದ್ದಾರೆ. ಅಲ್ಲದೆ, ವಿಚ್ಛೇದನದ ಸುದ್ದಿಯನ್ನು ಹಂಚಿಕೊಂಡಿರುವ ಸಂಯುಕ್ತಾ, ಈ 2025 ರಲ್ಲಿ ಕೊನೆಗೂ ನನ್ನ ಎಲ್ಲಾ ಪೇಪರ್ ಕೆಲಸಗಳನ್ನು ಮುಗಿಸಿದ್ದೇನೆ. ಎಂದಿಗಿಂತಲೂ ಈಗ ಬಲಶಾಲಿಯಾಗಿದ್ದೇನೆ ಎಂದು ಹೇಳಿದ್ದಾರೆ.



ಇದಕ್ಕೂ ಮುನ್ನ ಒಂದು ವಾಹಿನಿಗೆ ನೀಡಿದ ಸಂದರ್ಶನದಲ್ಲಿ, ಸಂಯುಕ್ತಾ ತನ್ನ ಗಂಡನಿಗೆ ಬೇರೊಬ್ಬ ಮಹಿಳೆಯೊಂದಿಗೆ ಸಂಬಂಧವಿರುವುದಾಗಿ ಬಹಿರಂಗವಾಗಿ ಹೇಳಿ ಸಂಚಲನ ಮೂಡಿಸಿದ್ದರು. ಕೊರೊನಾ ಲಾಕ್‌ಡೌನ್‌ನಲ್ಲಿ ನನ್ನ ಗಂಡ ದುಬೈನಲ್ಲಿ 4 ವರ್ಷಗಳಿಗೂ ಹೆಚ್ಚು ಕಾಲ ಬೇರೊಬ್ಬ ಮಹಿಳೆಯೊಂದಿಗೆ ಇರುವುದು ಗೊತ್ತಾಯಿತು. ಆಗ ಕೊರೊನಾ ಲಾಕ್‌ಡೌನ್ ಆಗಿದ್ದರಿಂದ ನಾನು ಎಲ್ಲಿಗೂ ಹೋಗಲು ಸಾಧ್ಯವಾಗಲಿಲ್ಲ ಎಂದು ಅಳಲು ತೋಡಿಕೊಂಡಿದ್ದರು.

ಪತಿ ನನಗೆ ಮೋಸ ಮಾಡಿದಾಗ ದಿಕ್ಕೇ ತೋಚದಂತಾಯಿತು, ಆದರೆ ಈ ವೇಳೆ ನನಗೆ ಸಹಾಯ ಮಾಡಿದ್ದು ಭಾವನಾ ಬಾಲಕೃಷ್ಣನ್. ನಾನು ಇದ್ದ ಅದೇ ಅಪಾರ್ಟ್‌ಮೆಂಟ್‌ನಲ್ಲಿ ಅವರೂ ಇದ್ದರು. ಆರಂಭದಲ್ಲಿ ಹಾಯ್, ಬಾಯ್ ಎನ್ನುವಷ್ಟರ ಮಟ್ಟಿಗೆ ನಮ್ಮ ಸ್ನೇಹವಿತ್ತು. ಅವರು ನನ್ನ ಕುಟುಂಬದ ಬಗ್ಗೆ ಕೇಳಲು, ನಾನು ಎಲ್ಲವನ್ನೂ ಹೇಳಿದೆ. ಆಗ ಅವರು ನನಗೆ ಸಮಾಧಾನ ಹೇಳಿದರು.

ಲಾಕ್‌ಡೌನ್ ಆಗಿದ್ದರಿಂದ ಮನೆಯಲ್ಲೇ ವ್ಯಾಯಾಮ ಮಾಡುತ್ತಿದ್ದೆವು. ಅದರ ನಂತರ ಇಬ್ಬರೂ ಹತ್ತಿರವಾಯಿತು. ನಂತರ ನನಗೆ 8ನೇ ವರ್ಷದ ಮದುವೆ ವಾರ್ಷಿಕೋತ್ಸವ ಬಂದಿತು. ಅವರು ನನಗೆ ಸಾಕಷ್ಟು ಸಲಹೆಗಳನ್ನು ನೀಡಿದರು. ನಾನು ಏನು ಇಷ್ಟಪಡುತ್ತೇನೋ ಅದನ್ನೇ ಮಾಡಲು ಹೇಳಿದರು. ಬಿಗ್ ಬಾಸ್ ಶೋದಲ್ಲಿ ಪಾಲ್ಗೊಳ್ಳಲು ಉತ್ತೇಜನ ನೀಡಿದರು. ಹೀಗಾಗಿ ಬದುಕಿನ ಸಂಕಷ್ಟಗಳಿಂದ ಹೊರಬರಲು ಸಾಧ್ಯವಾಯಿತು ಎಂದಿದ್ದಾರೆ. ಬಿಗ್ ಬಾಸ್ ಸೀಸನ್ 4 ಕಾರ್ಯಕ್ರಮದಲ್ಲಿ ಭಾಗವಹಿಸುವ ಮೊದಲು ಸಂಯುಕ್ತ ಕೆಲ ಧಾರವಾಹಿಗಳಲ್ಲಿ ಕಾಣಿಸಿಕೊಂಡಿದ್ದರು. ವೈವಾಹಿಕ ಜೀವನದಲ್ಲಿನ ಸಮಸ್ಯೆಗಳಿಂದ ತೀವ್ರವಾಗಿ ನೊಂದಿದ್ದ ಸಂಯುಕ್ತ, ಬಳಿಕ ಬಿಗ್ ಬಾಸ್ ಮೂಲಕ ಜನಪ್ರಿಯತೆ ಮಾತ್ರವಲ್ಲ, ಅವಕಾಶಗಳನ್ನು ಹೆಚ್ಚಿಸಿಕೊಂಡರು.

# ಯಾಕೆ ಸಣ್ಣ ಆಗಿದ್ಯಾ... ದಪ್ಪನೇ ಇರು



ಮೊಗ್ಗಿನ ಮನಸ್ಸಿನ ಹುಡುಗಿ, ಬಿಗ್ ಬಾಸ್ ಸ್ಪರ್ಧಿ ಹಾಗೂ ಕನ್ನಡಿಗರ ಮನಸ್ಸು ಗೆದ್ದ ಸುಂದರಿ ಶುಭಾ ಪೂಂಜಾ ಈಗ ಬಾಯ್ಸ್ ವರ್ಸಸ್ ಗರ್ಲ್ಸ್ ರಿಯಾಲಿಟಿ ಶೋನಲ್ಲಿ ಸ್ಪರ್ಧಿಸುತ್ತಿದ್ದಾರೆ.

ಗರ್ಲ್ಸ್ ಗ್ಯಾಂಗ್ ಲೀಡರ್ ಆಗಿರುವ ಶುಭಾ ಪೂಂಜಾ ಪ್ರತಿ ಎಪಿಸೋಡ್‌ನಲ್ಲೂ ಸಖತ್ ಕಲರ್ ಫುಲ್ ಆಗಿ ಕಾಣಿಸಿಕೊಳ್ಳುತ್ತಾರೆ. ಹೀಗಾಗಿ ಪ್ರತಿ ಲುಕ್‌ನಲ್ಲಿ ಫೋಟೋಶೂಟ್ ಮಾಡುತ್ತಾರೆ.

ಇತ್ತೀಚಿಗೆ ಬಾಯ್ಸ್ ವರ್ಸಸ್ ಗರ್ಲ್ಸ್ ಎಪಿಸೋಡ್‌ಗೆ ಹಳದಿ ಬಣ್ಣದ ಡ್ರೆಸ್ ಧರಿಸಿದ್ದರು. ಲಕ್ಷ್ಮಿ ಕೃಷ್ಣ ಡಿಸೈನರ್ ಉಡುವು ಇದಾಗಿದ್ದು ಮೇಕಪ್ ಕೂಡ ಅವರೇ ಮಾಡಿದ್ದರು. ಫೋಟೋ ಕ್ಲಿಕ್ ಮಾಡಿರುವುದು ರಾಘವ್ ಸ್ಟುಡಿಯೋದವರು.

ಸೂರ್ಯಕಾಂತಿ ಮುಂದೆ ನಿಂತು ಶುಭಾ ಪೂಂಜಾ ಡಿಫರೆಂಟ್ ಪೋಸ್‌ಗಳನ್ನು ನೀಡಿದ್ದಾರೆ. ಮೊದಲ ಸಿನಿಮಾ ಮೊಗ್ಗಿನ ಮನಸ್ಸು ಚಿತ್ರದಲ್ಲಿ ಹೇಗಿದ್ದರು ಅದೇ ರೀತಿ ಇಲ್ಲಿ ಕಾಣಿಸುತ್ತಿದ್ದಾರೆ.

'ಅಯ್ಯೋ ಇದೇನು ಶುಭಾ ನೀನು ಇಷ್ಟೊಂದು ಸಣ್ಣ ಆಗಿದ್ಯಾ? ನೀನು ದಪ್ಪನೇ ಇರು ಆಗ ನಮಗೆ ನೀನು ಪುಟ್ಟ ಹುಡುಗಿ ಅಂತೆ ಮುದ್ದು' ಎಂದು ಅಭಿಮಾನಿಯೊಬ್ಬ ಕಾಮೆಂಟ್ ಮಾಡಿದ್ದಾನೆ.

ಬಿಗ್ ಬಾಸ್ ರಿಯಾಲಿಟಿ ಶೋ ಮುಗಿಯುತ್ತಿದ್ದಂತೆ ಶುಭಾ ಪೂಂಜಾ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಅದಾದ ಮೇಲೆ ಅಲ್ಲಿ ಇಲ್ಲಿ ಕಾರ್ಯಕ್ರಮ ಮತ್ತು ರಿಯಾಲಿಟಿ ಶೋನಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಈಗ ಗರ್ಲ್ಸ್ ಗ್ಯಾಂಗ್‌ನ ಲೀಡರ್ ಆಗಿ ಮಿಂಚುತ್ತಿದ್ದಾರೆ.

# ಪ್ರೀತಿ ಪಡೆದುಕೊಂಡವರಿಗೂ, ಕಳೆದುಕೊಂಡವರಿಗೂ ಹಿಡಿಸುವ 'ಭಾವ ತೀರ ಯಾನ'



ಪ್ರೀತಿಯ ಆಳ-ಅಗಲ ಎಷ್ಟು ಎಂಬುದು ಅಷ್ಟು ಸುಲಭಕ್ಕೆ ತಿಳಿಯುವಂಥದ್ದಲ್ಲ. ನಾವು ಅಂದುಕೊಳ್ಳುವುದಕ್ಕಿಂತಲೂ ಭಿನ್ನವಾಗಿರುತ್ತದೆ ಪ್ರೀತಿಯ ಸ್ವರೂಪ. ನಾವು ಪ್ರೀತಿಸಿದವರೇ ನಮಗೆ ಸಿಗಬೇಕು ಎಂದು ಮನಸ್ಸು ಬಯಸುತ್ತದೆ. ಆದರೆ ನಮ್ಮ ಪಾಲಿಗೆ ಸಿಕ್ಕವರನ್ನೇ ಪ್ರೀತಿಸಬೇಕು ಎಂದು ಜೀವನ ಪಾಠ ಕಲಿಸುತ್ತದೆ.

ಬಹುತೇಕ ಎಲ್ಲರ ಬದುಕಿನಲ್ಲೂ ಇಂಥ ಅನುಭವಗಳು ಆಗಿರುತ್ತವೆ. ಆ ರೀತಿಯ ಅನುಭವಗಳೇ ತುಂಬಿರುವ ಕಥೆಯನ್ನು 'ಭಾವ ತೀರ ಯಾನ' ಸಿನಿಮಾದಲ್ಲಿ ತೋರಿಸಲಾಗಿದೆ. ಹೆಸರಿಗೆ ತಕ್ಕಂತೆ ಈ ಸಿನಿಮಾದಲ್ಲಿ ಎಮೋಷನ್ ತುಂಬಿದೆ.

ಪ್ರೀತಿ-ಪ್ರೇಮದ ಸಹವಾಸವೇ ಬೇಡ ಎಂದುಕೊಂಡಿದ್ದ ಕಥಾನಾಯಕನಿಗೆ ಏಕಾಏಕಿಯಾಗಿ ಪ್ರೇಮಾಂಕುರ ಆಗುತ್ತದೆ. ಆ ಪ್ರೀತಿಯನ್ನು ಹೇಳಿಕೊಳ್ಳಬೇಕು ಎಂದಾಗ ಒಂದು ಆಘಾತ ಎದುರಾಗುತ್ತದೆ. ಅದರಿಂದ ಹೊರಬರಬೇಕು ಎಂದುಕೊಳ್ಳುವಾಗ ಆತನ ಮೇಲೆ ಬೇರೊಬ್ಬ ಹುಡುಗಿಗೆ ಲವ್ ಆಗುತ್ತದೆ. ಅಂತೂ ಇಂತೂ ಆತನ ಲವ್ ಲೈಫ್ ಸರಿದಾರಿಗೆ ಬಂದು ಎಂದುಕೊಳ್ಳುವಷ್ಟರಲ್ಲಿ ಹಳೇ ಹುಡುಗಿಯ ರೀ-ಎಂಟ್ರಿ ಆಗುತ್ತದೆ. ಮೇಲ್ನೋಟಕ್ಕೆ ಇದೊಂದು ಸರಳವಾದ ತ್ರಿಕೋನ ಪ್ರೇಮಕಥೆ ಎನಿಸಿದರೂ ಅದನ್ನು ನವಿರಾಗಿ ತೆರೆಗೆ ತರಲಾಗಿದೆ.

'ಭಾವ ತೀರ ಯಾನ'ದಲ್ಲಿ ಸಾಕಷ್ಟು ತಿರುವುಗಳು ಇವೆ. ಪ್ರತಿ ತಿರುವಿನಲ್ಲೂ ಪ್ರೀತಿಯ ಸ್ವರೂಪ ಬದಲಾಗುತ್ತದೆ. ಯೌವನದಲ್ಲಿ ಶುರುವಾದ ಪ್ರೇಮ ನಡುವೆ ಎಲ್ಲೋ ಕಳೆದುಹೋಗಿ, ಮತ್ತೆ ವೃದ್ಧಾಪ್ಯದಲ್ಲಿ ಮರಳಿ ಬರುತ್ತದೆ. ಆಗಲೂ ಆ ಪ್ರೀತಿಯಲ್ಲಿ ತೀವ್ರತೆ ಕಡಿಮೆ ಆಗಿರುವುದಿಲ್ಲ. ಈ ರೀತಿಯ ಕಥೆಯನ್ನು ಅಚ್ಚುಕಟ್ಟಾಗಿ ಪ್ರೇಕ್ಷಕರ ಮುಂದೆ ಇಡಲಾಗಿದೆ. ಮುಂದೇನಾಗುತ್ತದೆ ಎಂಬ ಕೌತುಕವನ್ನು ಕೊನೇ ತನಕ ಕಾಯ್ದುಕೊಂಡು ಈ ಸಿನಿಮಾದ ಕಥೆ ಸಾಗುತ್ತದೆ.

ಎಲ್ಲ ವರ್ಗದ ಪ್ರೇಕ್ಷಕರಿಗೂ 'ಭಾವ ತೀರ ಯಾನ' ಸಿನಿಮಾ ಹತ್ತಿರ ಆಗುತ್ತದೆ. ಈಗತಾನೇ ಪ್ರೀತಿಯಲ್ಲಿ ಬೀಳಬೇಕು ಎಂದು ಹಂಬಲಿಸುತ್ತಿರುವ ಯುವ ಮನಸ್ಸುಗಳಿಗೆ ಮುದ ನೀಡುವಂತಹ ದೃಶ್ಯಗಳು ಈ ಸಿನಿಮಾದಲ್ಲಿ ಇವೆ. ಹಾಗೆಯೇ, ಪ್ರೀತಿಯನ್ನು ಕಳೆದುಕೊಂಡು ಕಣ್ಣೀರು ಹಾಕುತ್ತಿರುವವರಿಗೆ ಕನೆಕ್ಟ್ ಆಗುವಂತಹ ದೃಶ್ಯಗಳು ಸಹ ಇವೆ. ಇನ್ನು, ಇಳಿವಯಸ್ಸಿನಲ್ಲಿ ತಮ್ಮ ಬದುಕಿನ ನೆನಪನ್ನು ಮೆಲುಕು ಹಾಕುವ ಹಿರಿಯ ಜೀವಗಳಿಗೂ ಆಪ್ತ ಎನಿಸುವಂತಹ ಸನ್ನಿವೇಶಗಳ ಕೂಡ ಈ ಚಿತ್ರದಲ್ಲಿವೆ.

ಇದು ಪಕ್ಕಾ ಕ್ಲಾಸ್ ಸಿನಿಮಾ. ಹೊಡಿಬಡಿ ದೃಶ್ಯಗಳಾಗಲೀ, ಅಬ್ಬರದ ಸಂಭಾಷಣೆಗಳಾಗಲಿ ಈ ಸಿನಿಮಾದಲ್ಲಿ ಇಲ್ಲ. ಎಲ್ಲವನ್ನೂ ಸರಳವಾಗಿ, ಸುಂದರವಾಗಿ ನಿರೂಪಿಸಲಾಗಿದೆ. ಕಲಾವಿದರಾದ ತೇಜಸ್ ಕಿರಣ್, ಅನುಷಾ ಕೃಷ್ಣ, ಆರೋಹಿ ನೈನಾ ಮುಂತಾದವರು ಚೆನ್ನಾಗಿ ಅಭಿನಯಿಸಿದ್ದಾರೆ. ಹಿರಿಯರಾದ ರಮೇಶ್ ಭಟ್, ವಿದ್ಯಾ ಮೂರ್ತಿ ಅವರು ಈ ಚಿತ್ರಕ್ಕೆ ಮೆರುಗು ತಂದುಕೊಟ್ಟಿದ್ದಾರೆ. ಮಯೂರ್ ಅಂಬೆಕಲ್ಲು ಅವರ ಸಂಗೀತದಿಂದಾಗಿ ಸಿನಿಮಾದಲ್ಲಿನ 'ಭಾವ'ತೀವ್ರತೆ ಹೆಚ್ಚಿದೆ.


ರಾಧಾ-ಕೃಷ್ಣನ ಪ್ರೇಮಕಥೆಯ ಎಳೆಯನ್ನೇ ಸ್ಫೂರ್ತಿಯಾಗಿ ಇಟ್ಟುಕೊಂಡು 'ಭಾವ ತೀರ ಯಾನ' ಸಿನಿಮಾ ಸಾಗುತ್ತದೆ. ಕಥೆಯ ಅಂತ್ಯವೂ ಹಾಗೆಯೇ ಕಾಡುತ್ತದೆ. ಕೃಷ್ಣನ ಕೊಳಲಿನ ನಾದ ಕೇಳುತ್ತಾ ರಾಧೆ ಮಡಿದ ಸನ್ನಿವೇಶವನ್ನು ನೆನಪಿಸುತ್ತದೆ ಈ ಸಿನಿಮಾದ ಕ್ಲೈಮ್ಯಾಕ್ಸ್. ಸಿಗುವ ಪ್ರೀತಿಯನ್ನು ಕಳೆದುಕೊಳ್ಳಬಾರದು ಎಂಬುದನ್ನು ಮನವರಿಕೆ ಮಾಡಿಕೊಡುವ ರೀತಿಯಲ್ಲಿ ಈ ಸಿನಿಮಾ ಆವರಿಸಿಕೊಳ್ಳುತ್ತದೆ.



# ಐಕಾನಿಕ್ ಜೀನತ್ ಅಮಾನ್ ಭೇಟಿ ಮಾಡಿದ ಸಾನ್ಯಾ

ಬಾಲಿವುಡ್ ನಟ-ನಟಿಯರನ್ನು ಯಾರೇ ಭೇಟಿ ಮಾಡಿದ್ದರೂ ಸಖತ್ ಖುಷಿಯಾಗಿರುತ್ತಾರೆ. ಸಿನಿಮಾರಂಗದಲ್ಲಿ ಹೆಸರು ಮಾಡಿದ್ದೀನಿ, ಸಾಧನೆ ಮಾಡಿದ್ದೀನಿ ಅಂದ್ರೆ ಬಿ-ಟೌನ್‌ಗೆ ಕಾಲಿಡುವುದು. ಜನರಲ್ಲಿ ಈಗಲೂ ಈ ಭಾವನೆ ಇದೆ. ತಮ್ಮ ಇಂಡಸ್ಟ್ರಿಯವರನ್ನು ಭೇಟಿ ಮಾಡಿದಾಗ ಆಗುವ ಖುಷಿಗಿಂತ ಡಬಲ್ ಖುಷಿ ಆಗುವುದು ಹಿಂದಿ ಚಿತ್ರರಂಗದವರನ್ನು ಭೇಟಿ ಮಾಡಿದಾಗ. ಅವರೇ ಸೆಲೆಬ್ರಿಟಿ ಆಗಿರುತ್ತಾರೆ ಅದನ್ನು ಮರೆತು ಅಭಿಮಾನಿಯಂತೆ ಅವರೊಟ್ಟಿಗೆ ಫೋಟೋ ಕ್ಲಿಕ್ ಮಾಡಿಕೊಳ್ಳುತ್ತಾರೆ. ಏಕೆಂದು ಇದು ಕಲೆಗೆ ಕೊಡುವ ಬೆಲೆ. ನಮ್ಮ ಕನ್ನಡ ಚಿತ್ರರಂಗದಲ್ಲಿ ಇರುವ ಪ್ರತಿಯೊಬ್ಬ ಕಲಾವಿದರು ಕೂಡ ಮತ್ತೊಂದು ಭಾಷೆ ಕಲಾವಿದರಿಗೆ ಕೊಡುವ ಬೆಲೆ ಅಪಾರ. ಆ ಗೌರವದಿಂದಲೇ ಸಾನ್ಯಾ ಈ ಫೋಟೋ ಕ್ಲಿಕ್ ಮಾಡಿಕೊಂಡಿರುವುದು. ಹೌದು! ಬಾಲಿವುಡ್ ನಟಿ ಜೀನತ್ ಅಮಾನ್ ಅವರನ್ನು ಪುಟ್ಟ ಗೌರಿ ಮದುವೆ ಹಾಗೂ ಬಿಗ್ ಬಾಸ್ ಖ್ಯಾತಿಯ ಸಾನ್ಯಾ ಅಯ್ಯರ್ ಭೇಟಿ ಮಾಡಿದ್ದಾರೆ. ದುಬೈ ಕ್ರೀಕ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಇಬ್ಬರು ಭೇಟಿ ಮಾಡಿದ್ದಾರೆ. ಫ್ಲೋರಲ್ ಬಣ್ಣದ ಮ್ಯಾಕಿಯಲ್ಲಿ ಸಾನ್ಯಾ ನಿಂತುಕೊಂಡು ನಗುತ್ತಿದ್ದಾರೆ. ಸಿಲ್ವರ್ ಬಣ್ಣದ ಸೆಲ್ವಾರ್‌ನಲ್ಲಿ ಜೀನತ್ ಅಮಾನ್ ರಾಣಿ ರೀತಿ ಕುಳಿತಿದ್ದಾರೆ.

'ಈಕಾನಿಕ್..ದಿ ಜೀತನ್ ಅಮಾನ್. ಒಂದು ನಿಮಿಷ ಮಿಂಚಿನಂತೆ ಕಾಣಿಸಿಕೊಳ್ಳುತ್ತಾರೆ. ಅವರ ಸಮತೋಲನವೇ ಅವಳ ಶಕ್ತಿಆದರೂ ಅವರ ಹೃದಯದ ವಿರುದ್ಧ ಯಾವುದೇ ಕಾವಲು ಇಲ್ಲ. ಇಂಡಸ್ಟ್ರಿಯಲ್ಲಿ ಅವರ ಜರ್ನಿಯನ್ನು ಹತ್ತಿರದಿಂದ ನೋಡಿದಾಗ ಖಂಡಿತ ನೀವು ಹತ್ತಿರವಾಗುತ್ತೀರಿ. ೦ಖ ಶೀಫ್‌ನಲ್ಲಿ ದಿ ಲೆಜೆಂಡ್‌ನ ಭೇಟಿ ಮಾಡಿದ್ದು ನಿಜಕ್ಕೂ ನನ್ನ ಜೀವನದ ಅದ್ಭುತ ರಾತ್ರಿ. ಇದು ಫ್ಯಾನ್ ಗರ್ಲ್ ಕ್ಷಣ' ಎಂದು ಸಾನ್ಯಾ ಬರೆದುಕೊಂಡಿದ್ದಾರೆ. 70ರ ದಶಕದಲ್ಲಿ ಹಿಂದಿ ಚಿತ್ರರಂಗದ ಟಾಪ್ ನಟಿ ಜೀನತ್ ಅಮಾನ್. ನೂರಾನು ಸಿನಿಮಾಗಳಲ್ಲಿ ಮಿಂಚಿ ಸಾವಿರಾರು ಪ್ರಶಸ್ತಿಗಳನ್ನು ತಮ್ಮ ಮಡಿಲಿಗೆ ಏರಿಸಿಕೊಂಡಿದ್ದಾರೆ. ವೈಯಕ್ತಿಕ ಜೀವನಕ್ಕೆ ಸಾಕಷ್ಟು ಏರು ಪೇರು ಕಂಡರೂ ಕೂಡ ಜೀನತ್ ಅಮಾನ್ ಅದನ್ನು ಸಿನಿಮಾ ಮೇಲೆ ತೋರಿಸಲಿಲ್ಲ. 73 ವರ್ಷದ ಜೀತನ್ ಅಮಾನ್ ಎಲ್ಲೇ ಕಾಣಿಸಿಕೊಂಡು ಅದೇ ಸ್ಟೈಲ್ ಅದೇ ಲುಕ್. 2020ರಲ್ಲಿ ಕಮ್ ಬ್ಯಾಕ್ ಮಾಡುವುದಾಗಿ ಜೀತನ್ ಅನೌನ್ಸ್ ಮಾಡಿದ್ದರು ಆದರೆ ಅಲ್ಲೊಂದು ಇಲ್ಲೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 'ನನ್ನ ವಯಸ್ಸಿಗೆ ತಕ್ಕ ಪಾತ್ರಗಳು ತುಂಬಾ ಕಡಿಮೆ ಇದೆ ಅದರಲ್ಲೂ ಹಿಂದಿ ಚಿತ್ರರಂಗದಲ್ಲಿ ತುಂಬಾ ದೂರ. ಅದ್ಭುತ ಪಾತ್ರಗಳು ಬಂದ್ರೆ ಖಂಡಿತ ನಟಿಸುತ್ತೀನಿ' ಎಂದಿದ್ದರು. ಸದ್ಯ ಗೌರಿ ಸಿನಿಮಾ ಅದ್ಮೇಲೆ ಸಾನ್ಯಾ ಅಯ್ಯರ್ ಮುಂದಿನ ಪ್ರಾಜೆಕ್ಟ್ ರಿವೀಲ್ ಮಾಡಿಲ್ಲ. ಆದರೆ ಸೋಷಿಯಲ್ ಮೀಡಿಯಾ ಮೂಲಕ ಜನರೊಟ್ಟಿಗೆ ಸಂಪರ್ಕದಲ್ಲಿ ಇದ್ದಾರೆ ಹಾಗೂ ಫೋಟೋಗಳನ್ನು ಅಪ್ಲೋಡ್ ಮಾಡುತ್ತಿರುತ್ತಾರೆ.



# 'ಕಬೀರ್ ಸಿಂಗ್' ಸಿನಿಮಾದಲ್ಲಿ ನಟಿಸಿದ್ದಕ್ಕೆ ಆಫರ್ ಕಳೆದುಕೊಂಡ ನಟ

'ಕಬೀರ್ ಸಿಂಗ್' ಸಿನಿಮಾ ತೆಲುಗಿನ 'ಅರ್ಜುನ್ ರೆಡ್ಡಿ' ಚಿತ್ರದ ರಿಮೇಕ್ ಆಗಿದೆ. ಈ ಸಿನಿಮಾ ಸೂಪರ್ ಹಿಟ್ ಆಯಿತು. ಹಿಂದಿ ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಮಟ್ಟದ ಗೆಲುವು ಕಂಡಿತು. ಈ ಚಿತ್ರದಿಂದ ನಟ ಶಾಹಿದ್ ಕಪೂರ್ ಮಾರುಕಟ್ಟೆ ಹಿರಿದಾಯಿತು. ಶಾಕಿಂಗ್ ವಿಚಾರ ಎಂದರೆ ಈ ಸಿನಿಮಾ ಮಾಡಿದ್ದಕ್ಕೆ ನಟನೊಬ್ಬನಿಗೆ ಆಫರ್‌ಗಳು ಕೈ ತಪ್ಪಿ ಹೋದವು.

'ಕಬೀರ್ ಸಿಂಗ್' ಚಿತ್ರವನ್ನು ಮಾಡಿದ್ದು ಸಂದೀಪ್ ರೆಡ್ಡಿ ವಂಗ. ಈ ಚಿತ್ರದಲ್ಲಿ ಪುರುಷರದ್ದೇ ಮೇಲುಗೈ ಎಂದು ತೋರಿಸಿದ್ದಕ್ಕೆ ಟೀಕೆ ಎದುರಿಸಬೇಕಾಯಿತು. ಆದರೆ, ಇದನ್ನು ಅವರು ನಿಲ್ಲಿಸಿಲ್ಲ. 'ಅನಿಮಲ್' ಚಿತ್ರದಲ್ಲೂ ಇದನ್ನು ಮುಂದುವರಿಸಿದರು. ಈಗ ಅವರು ಒಂದು ಶಾಕಿಂಗ್ ವಿಚಾರ ರಿವೀಲ್ ಮಾಡಿದ್ದಾರೆ. ದೊಡ್ಡ ಪ್ರೊಡಕ್ಷನ್ ಕಂಪನಿಯೊಂದು 'ಕಬೀರ್ ಸಿಂಗ್' ಸಿನಿಮಾದ ಕಲಾವಿದನಿಗೆ ನೀಡಿದ್ದ ಆಫರ್‌ನ ಕಸಿದುಕೊಂಡಿತ್ತು ಎಂದಿದ್ದಾರೆ.




'ಕಬೀರ್ ಸಿಂಗ್ ಚಿತ್ರದಲ್ಲಿ ನಟಿಸಿದ್ದಾರೆ ಎನ್ನುವ ಕಾರಣಕ್ಕೆ ಸಿನಿಮಾ ಆಫರ್‌ನ ರಿಜೆಕ್ಟ್ ಮಾಡಲಾಯಿತು. ಅದೂ ದೊಡ್ಡ ನಿರ್ಮಾಣ ಸಂಸ್ಥೆ. ನನಗೆ ಈ ವಿಚಾರ ಬೇರೆಯವರಿಂದ ತಿಳಿಯಿತು. ನನಗೆ ಆಗ ತುಂಬಾನೇ ಕೋಪ ಬಂದಿತ್ತು' ಎಂದು ಸಂದೀಪ್ ರೆಡ್ಡಿ ವಂಗ ಹೇಳಿದ್ದಾರೆ. ಆದರೆ, ಎಲ್ಲಿಯೂ ಅವರು ನಿರ್ಮಾಣ ಸಂಸ್ಥೆಯ ಹೆಸರನ್ನು ಹೇಳಿಲ್ಲ. ಕಲಾವಿದನ ಹೆಸರನ್ನೂ ಅವರು ರಿವೀಲ್ ಮಾಡಿಲ್ಲ.

ಸಂದೀಪ್ ರೆಡ್ಡಿ ಅವರು ಈ ವೇಳೆ ಒಂದು ಚಾಲೆಂಜ್ ಮಾಡಿದ್ದಾರೆ. 'ಅವರಿಗೆ ಧೈರ್ಯ ಇದ್ದರೆ ನನ್ನ ಜೊತೆ ಕೆಲಸ ಮಾಡಿದ ರಣಬೀರ್ ಕಪೂರ್, ತೃಪ್ತಿ ದಿಮ್ರಿ, ರಶ್ಮಿಕಾ ಮಂದಣ್ಣ ಅಥವಾ ಇನ್ಯಾರೇ ಸ್ಟಾರ್ ಕಲಾವಿದರನ್ನು ರಿಜೆಕ್ಟ್ ಮಾಡಲಿ' ಎಂದು ಹೇಳಿದ್ದಾರೆ.

ಸಂದೀಪ್ ರೆಡ್ಡಿ ಅವರನ್ನು ಇಂಡಸ್ಟ್ರಿಯ ಕೆಲವರು ಹೇಟ್ ಮಾಡುತ್ತಾರೆ. ಇದಕ್ಕೆ ಕಾರಣ ಹಲವು. ಅವರು ಸಿನಿಮಾಗಳಲ್ಲಿ ಆಲ್ಫಾ ಮೇಲ್‌ನ ಹೆಚ್ಚು ಹೈಲೈಟ್ ಮಾಡುತ್ತಾರೆ. ಇದು ಅನೇಕರಿಗೆ ಇಷ್ಟ ಆಗುವುದಿಲ್ಲ. ಈ ಕಾರಣಕ್ಕೆ 'ಅನಿಮಲ್' ಹಾಗೂ 'ಕಬೀರ್ ಸಿಂಗ್' ಚಿತ್ರವನ್ನು ಟೀಕೆ ಮಾಡಿದ್ದು ಇದೆ.

ಸಂದೀಪ್ ರೆಡ್ಡಿ ಅವರು ಸದ್ಯ ಪ್ರಭಾಸ್ ನಟನೆಯ 'ಸ್ಪಿರಿಟ್' ಸಿನಿಮಾ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಚಿತ್ರದ ಬಗ್ಗೆ ಅಭಿಮಾನಿಗಳು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಈ ಸಿನಿಮಾದಲ್ಲಿ ಪ್ರಭಾಸ್ ಪೊಲೀಸ್ ಅಧಿಕಾರಿಯ ಪಾತ್ರ ಮಾಡುತ್ತಿದ್ದಾರೆ.

ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 944807487